ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 25

೨೦ ಏಪ್ರಿಲ್ ೧೯೫೮

★

ಪುಟ ೧೦ ಬೆಲೆ: ೧೩ ನಯೇ ಪೈಸೆ

★

ಭಾರತ ಕಮ್ಯೂನಿಸ್ಟ್ ಪಕ್ಷದ ವಿಶೇಷ ಅಧಿವೇಶನ

ಪಾರ್ಟಿಯ ನೂತನ ಘಟನಾವಳಿಯ ಅಂಗೀಕಾರ

ಅಮೃತಸರದಲ್ಲಿ ಏಪ್ರಿಲ್ 6ರಿಂದ 13 ರವರೆಗೆ ನಡೆದ ಭಾರತ ಕಮ್ಯೂನಿಸ್ಟ್ ಪಕ್ಷದ ವಿಶೇಷ ಅಧಿವೇಶನವು ಪಾರ್ಟಿಯ ನೂತನ ಘಟನಾವಳಿಯನ್ನು ಅಂಗೀಕರಿಸಿದೆ. ನೂತನ ಘಟನಾವಳಿಯ ಅಂಗೀಕಾರವು ಪಾರ್ಟಿಯ ಇತಿಹಾಸದಲ್ಲಿ ಮಹತ್ವವಾದ ಅಂಶವಾಗಿದೆ. ದೀರ್ಘವಾದ ಚರ್ಚೆಯ ನಂತರದಲ್ಲಿ ಪ್ರತಿನಿಧಿಗಳು ಒಮ್ಮತದಿಂದ ಘಟನೆಗೆ ಒಪ್ಪಿಗೆಯಿತ್ತಿದ್ದಾರೆ. "ಕಮ್ಯೂನಿಸ್ಟ್ ಪಾರ್ಟಿ ಜಿಂದಾಬಾದ್!" ಎಂದು ಘೋಷಣೆಯಿತ್ತು ಪ್ರತಿನಿಧಿಗಳು ಹೊಸ ಘಟನೆಯನ್ನು ಅನುಮೋದಿಸಿದ್ದಾರೆ.

ನೂತನ ಘಟನಾವಳಿಗೆ ಅನುಸಾರವಾಗಿ ರಾಷ್ಟ್ರೀಯ ಮಂಡಲ, ರಾಷ್ಟ್ರೀಯ ಕಾರ್ಯಕಾರಿ ಸಮಿತಿ, ಸೆಕ್ರೆಟೆರಿಯಟ್‌ಗಳ ರಚನೆಯಾಗಿದೆ. ಕಾಂ|| ಅಜಯ ಕುಮಾರ್ ಘೋಷ್ ಮತ್ತೆ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಪಾರ್ಟಿಯು ಇಂದು ಅನುಮೋದಿಸಿರುವ ಘಟನೆಯು ಪಾರ್ಟಿಯನ್ನು ಹೆಚ್ಚು ಶಕ್ತಿಯುತವಾಗಿ ಮಾಡಲು, ವಿಸ್ತರಿಸಲು ಸಹಾಯಕವಾಗುವುದೆಂಬ ಭಾವನೆ ಎಲ್ಲ ಪ್ರತಿನಿಧಿಗಳಲ್ಲೂ ಮೂಡಿದೆ. ಘಟನಾವಳಿಯ ಮೇಲೆ ನಡೆದ ಚರ್ಚೆ ಇದಕ್ಕೆ ಸಾಕ್ಷಿಯಾಗಿದೆ.

ಕಾಂ|| ಅಜಯ ಘೋಷ್‌ರವರು ಪಾರ್ಟಿ ಸಂಘಟನೆಯ ಪರಿಸ್ಥಿತಿಯ ಬಗ್ಗೆ ವರದಿ ಇತ್ತನಂತರ ವಿವಿಧ ಪ್ರಾಂತ ಸಮಿತಿ ಕಾರ್ಯದರ್ಶಿಗಳು ತಮ್ಮ ವರದಿಗಳನ್ನು ಒಪ್ಪಿಸಿದರು. ವರದಿಗಳಲ್ಲಿ ಪಾರ್ಟಿ ಸಂಘಟನೆಯ ಬಗ್ಗೆ ಈ ಕಾಲಾವಧಿಯಲ್ಲಿನ ಅನುಭವಗಳನ್ನು ವ್ಯಕ್ತಗೊಳಿಸಲಾಯಿತು. ಪಾರ್ಟಿ ಸಂಘಟನೆಯನ್ನು ಬಲಗೊಳಿಸಲು ಅನೇಕ ಮುಖ್ಯವಾದ ಸಲಹೆಗಳನ್ನು ಮಂಡಿಸಲಾಯಿತು. ಸಂಘಟನೆ ಬಗ್ಗೆ ಅಮೃತಸರದ ವಿಶೇಷ ಅಧಿವೇಶನದ ಕರೆಯು ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಅಜಯ ಘೋಷ್‌ರವರ ಎರಡು ಘೋಷಣೆ "ಶಿಸ್ತನ್ನು ಬಲಗೊಳಿಸಿರಿ" "ವೈಯಕ್ತಿಕವಾದವನ್ನು ಮುರಿಯಿರಿ" ಯು ಪ್ರತಿನಿಧಿಗಳ ನಡುವೆ ಪ್ರತಿಧ್ವನಿಸಿದೆ. ಪಾರ್ಟಿ ನ್ಯೂನತೆಗಳನ್ನು ಸರಿಪಡಿಸಿ ಪ್ರಬಲವಾದ ಪಾರ್ಟಿಯನ್ನು ಕಟ್ಟಿ ಜನಸೇವೆಯಲ್ಲಿ ನಿರತರಾಗಲು ಪ್ರತಿನಿಧಿಗಳ ದೃಢನಿರ್ಧಾರ ಎದ್ದು ಕಾಣುತ್ತದೆ.

ಪ್ರಜಾಪ್ರಭುತ್ವ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತ ಪಾರ್ಟಿಯನ್ನು ನಿರ್ಮಿಸಲು ತೀರ್ಮಾನಿಸುವಾಗ ಅದರೊಂದಿಗೇ ಸೈದ್ಧಾಂತಿಕ ಶಿಕ್ಷಣದ ಪ್ರಶ್ನೆಯೂ ಉದ್ಭವಿಸಿದೆ. ಸಮತವಾದದ ಬಗ್ಗೆ ಪಾರ್ಟಿ ಶಿಕ್ಷಣವನ್ನು ವಿಶಾಲ ಪ್ರಮಾಣದಲ್ಲಿ ಒದಗಿಸಲು ಪ್ರತಿನಿಧಿಗಳು ಒತ್ತಾಯ ಪಡಿಸಿದ್ದಾರೆ ಮತ್ತು ಟೀಕೆ ಮತ್ತು ಸ್ವಯಂಟೀಕೆಯನ್ನು ಸರಿಯಾದ ರೀತಿಯಲ್ಲಿ ನಡೆಸುವುದರ ಮುಖ್ಯತ್ವವನ್ನು ಒತ್ತಿ ಹೇಳಲಾಗಿದೆ.

ರಾಜಕೀಯ ನಿರ್ಣಯದ ಅನುಮೋದನೆ

ಪಾರ್ಟಿ ಅಧಿವೇಶನವು ಕೊನೆಯಲ್ಲಿ ಪಾರ್ಟಿ ಸಂಘಟನೆಯನ್ನು ಕುರಿತು, ಪಾರ್ಟಿಯನ್ನು ಬಲಗೊಳಿಸುವ, ಪಾರ್ಟಿ ಕೇಂದ್ರಗಳನ್ನು ಬಲಗೊಳಿಸುವುದನ್ನು ಕುರಿತು ನಿರ್ಣಯವೊಂದನ್ನು ಅನುಮೋದಿಸಿತು.



★

ಭಾರತದ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಪುನರಾಯ್ಕೆಯಾಗಿರುವ

ಕಾಂ|| ಅಜಯ ಕುಮಾರ್ ಘೋಷ್

★

ರಾಜಕೀಯ ನಿರ್ಣಯದ ಮೇಲೆ ತೀವ್ರವಾದ ಚರ್ಚೆ ನಡೆದು ಅನುಮೋದನೆಯಾಯಿತು.

ಕೇರಳ ಜನತೆಗೆ ಅಭಿನಂದನೆ

ಅಧಿವೇಶನದಲ್ಲಿ ಕೇರಳ ಜನತೆಯನ್ನು ಮತ್ತು ಕಮ್ಯೂನಿಸ್ಟ್ ಪಾರ್ಟಿಯನ್ನು ಅಭಿನಂದಿಸುವ ನಿರ್ಣಯವೊಂದನ್ನು ಅಂಗೀಕರಿಸಲಾಯಿತು. ಕಾಂ|| ಇ.ಎಂ.ಎಸ್. ಕೇರಳ ಸರಕಾರವು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತು, ಕಮ್ಯೂನಿಸ್ಟ್ ಮಂತ್ರಿಮಂಡಲವು ಈ ಸಮಸ್ಯೆಗಳನ್ನು ಪರಿಹರಿಸಲು ತೆಗೆದುಕೊಂಡಿರುವ ಕ್ರಮಗಳನ್ನು ಕುರಿತು ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು.

ಅಧಿವೇಶನದಲ್ಲಿ ಫ್ರೆಂಚ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡುತ್ತಿರುವ ಆಲ್ಜೀರಿಯ ಸ್ವಾತಂತ್ರ್ಯ ಯೋಧರನ್ನು ಅಭಿನಂಧಿಸುವ, ಇಂಡೋನೇಷಿಯ ಜನತೆಯನ್ನು ಅಭಿನಂದಿಸುವ ನಿರ್ಣಯಗಳನ್ನು ಅನುಮೋದಿಸಲಾಯಿತು. ಪ್ರತಿನಿಧಿಗಳ ಅಧಿವೇಶನದಲ್ಲಿ ಭಾಷಣಮಾಡಿದ ನೇಪಾಳ ಮತ್ತು ಸಿಲೋನಿನ ಪ್ರತಿನಿಧಿಗಳನ್ನು ಅಭಿನಂದಿಸಲಾಯಿತು.

(ಕೊನೇ ಪುಟ ನೋಡಿ)



ಪ್ರತಿನಿಧಿ ಅಧಿವೇಶನದಲ್ಲಿ ಕಾಂ|| ಪಿ. ರಾಮಮೂರ್ತಿಯವರು ಭಾಷಣ ಮಾಡುತ್ತಿರುವುದು



ಪ್ರತಿನಿಧಿಗಳ ಅಧಿವೇಶನದ ಒಂದು ವಿಭಾಗ

ಮೈಸೂರು ವಿಧಾನ ಸಭೆಯ ಕಾರ್ಯಕಲಾಪಗಳು — ಒಂದು ಸಮೀಕ್ಷೆ

ಮೈಸೂರು ವಿಧಾನ ಸಭೆಯು ಪ್ರಸ್ತುತ ಬಜೆಟ್ ಅಧಿವೇಶನದ ಈವರೆಗೆ ನಡೆದಿರುವ ಕಾರ್ಯಕಲಾಪಗಳನ್ನು ಅವಲೋಕಿಸಿದಲ್ಲಿ ಒಂದೆರಡು ಘಟನೆಗಳು ಹೊರತಾಗಿ ಬೇರೆ ವಿಶೇಷವೇನಿಲ್ಲವೆನ್ನಬಹುದು. ಈ ಬಜೆಟ್ ಅಧಿವೇಶನದಲ್ಲಿ ಜನತೆಗೆ ಏನಾದರೂ ಅಲ್ಪ ಸ್ವಲ್ಪ ಪರಿಹಾರ ದೊರೆಯುವುದೇ ಎಂದು ನೋಡಿದವರಿಗೆ ನಿರಾಶೆಯಾಗಿದೆ. ಭೂಸುಧಾರಣೆಗಳನ್ನು ಕುರಿತು ಜತ್ತಿ ಸಮಿತಿ ವರದಿಯು ಆಧಾರದ ಮೇಲೆ ಸಮಗ್ರವಾದ ಮಸೂದೆಯನ್ನು ಈ ಅಧಿವೇಶನದಲ್ಲೇ ಮಂಡಿಸುವುದಾಗಿ ನಿಜಲಿಂಗಪ್ಪನವರು ಹೇಳಿದ್ದುದು ಈಗ ಕೈಬಿಟ್ಟಂತೆಯೇ ಕಾಣುತ್ತಿದೆ. ಅಧಿವೇಶನ ನಡೆಯುತ್ತಿದ್ದಾಗ ಮಧ್ಯದಲ್ಲಿ ನಿಜಲಿಂಗಪ್ಪನವರ ಸರಕಾರದ ಅಧಿಕಾರಕ್ಕೆ ಸಂಚಕಾರ ಬರುವುದೆಂಬ ಅವಾಂತರ ಬೇರೆ ಇದ್ದುದು ಈ ಅಧಿವೇಶನದ ವಿಶೇಷತೆ ಎಂದು ಹೇಳಬಹುದು.

ಜತ್ತಿ ಸಮಿತಿಯ ವರದಿಯ ಮೇಲೆ ಚರ್ಚೆ

ರಾಜ್ಯದಲ್ಲಿ ಭೂಸುಧಾರಣಾ ಮಸೂದೆಯನ್ನು ತಯಾರಿಸಲು ಸೂಕ್ತವಾದ ಸಲಹೆಗಳನ್ನು ಮಾಡಲು ನಿಯಮಿತವಾಗಿದ್ದ ಜತ್ತಿ ಸಮಿತಿಯ ವರದಿಯ ಮೇಲೆ ಚರ್ಚೆ ಸುಮಾರು ಎಂಟು ದಿನಗಳ ಕಾಲ ನಡೆಯಿತು. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮತ್ತು ಕೆಲವು ಅಧಿಕೃತ ಮಸೂದೆಗಳ ಅಂಗೀಕಾರವಾದ ನಂತರ ಜತ್ತಿ ಸಮಿತಿಯ ಮೇಲೆ ಚರ್ಚೆ ಆರಂಭವಾಯಿತು. ಕಳೆದ ಅಧಿವೇಶನದಲ್ಲಿ ಕೇವಲ ಎರಡು ದಿನಗಳು ಮಾತ್ರ ಚರ್ಚೆ ಆಗಿದ್ದಿತು. ಈ ಬಾರಿ ಚರ್ಚೆಯಲ್ಲಿ ಸುಮಾರು 56 ಮಂದಿ ಸದಸ್ಯರು ಭಾಷಣ ಮಾಡಿ, ತಮ್ಮ ಅಭಿಪ್ರಾಯಗಳನ್ನೂ, ಸಲಹೆಗಳನ್ನೂ ಇತ್ತಿದ್ದಾರೆ. ಎಂಟು ದಿನಗಳ ಕಾಲ ನಡೆದ ಈ ಚರ್ಚೆ ರಾಜ್ಯದಲ್ಲಿ ಎಲ್ಲರ ಗಮನವನ್ನೂ ಸೆಳೆದಿತ್ತು. ಏಕೆಂದರೆ, ಯಾವ ತೆರನಾದ ಭೂಸುಧಾರಣೆಗಳನ್ನೂ ತರಕೂಡದೆಂದು ತೀವ್ರವಾಗಿ ವಿರೋಧಿಸುವವರೂ ಮತ್ತು ಪ್ರಗತಿಪರವಾದ ಭೂಕಾಯಿದೆ ಶೀಘ್ರವಾಗಿ ಬರಬೇಕೆನ್ನುವವರೂ ತಮ್ಮ ವಾದಗಳನ್ನು ಮಂಡಿಸಿದರು. ಜತ್ತಿ ಸಮಿತಿ ವರದಿಯು ಭೂಮಾಲಿಕರು ರೈತರನ್ನಷ್ಟೇ ಅಲ್ಲದೆ, ಇತರ ಜನವಿಭಾಗದ ಗಮನವನ್ನೂ ಸೆಳೆದಿತ್ತು. ಭೂಮಾಲಿಕರ ಸಂಘಗಳಿಂದ, ರೈತ ಸಂಘಟನೆಗಳಿಂದ ಈ ಬಗ್ಗೆ ಬಂದ ಅನೇಕ ಮನವಿಗಳೂ, ಸಾರ್ವಜನಿಕವಾಗಿ ಪತ್ರಿಕೆಗಳಲ್ಲಿ ನಡೆದ ಚರ್ಚೆ ಇದಕ್ಕೆ ಸಾಕ್ಷಿಯಾಗಿದೆ.

ವಿಧಾನ ಸಭೆಯಲ್ಲಿ ಹೆಚ್ಚಿನ ಸದಸ್ಯರು ಸಮಿತಿಯ ವರದಿಗೆ ಸಾಮಾನ್ಯ ಸ್ವಾಗತ ನೀಡಿರುವರೆಂದು ಹೇಳಬಹುದು. ಎಚ್. ಎಂ. ಚನ್ನಬಸಪ್ಪ, ಕೆ. ಹನುಮಂತಯ್ಯ ಮತ್ತಿತರ ಹಳೆ ಮೈಸೂರಿನ ಕಾಂಗ್ರೆಸ್ ನಾಯಕರುಗಳೂ (ಹಿಂದಿನಿಂದಲೂ ಭೂಸುಧಾರಣೆ ಮೈಸೂರಿಗೆ ಅನಗತ್ಯವೆಂದು ವಾದಿಸುತ್ತಿರುವವರು) ವರದಿಯನ್ನು ತೀವ್ರವಾಗಿ ವಿರೋಧಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ ಶಾಸನ ಸಭಾ ಸದಸ್ಯರೂ ಮತ್ತೆ ಉತ್ತರ ಕರ್ನಾಟಕದ ಕೆಲವು ಭೂಮಾಲಿಕರ ಪರವಿರುವ ಸದಸ್ಯರು ಸಮಿತಿಯ ವರದಿಯನ್ನು ಭೂಸುಧಾರಣೆಗಳನ್ನು ವಿರೋಧಿಸಿದರು. ಶಾಸನ ಸಭೆಯಲ್ಲಿ ವಿರೋಧ ಪಕ್ಷವೆನ್ನಿಸಿಕೊಂಡಿರುವ ಪ್ರಜಾಸೋಷಲಿಸ್ಟ್ ಪಕ್ಷದ ಸದಸ್ಯರು ಸಮಿತಿಯ ವರದಿಯ ಬಗ್ಗೆ ಒಮ್ಮತದ ಅಭಿಪ್ರಾಯ ಕೊಡಲಿಲ್ಲ. ಪಕ್ಷದ ಸದಸ್ಯರೊಬ್ಬರು ಜತ್ತಿಸಮಿತಿಯ ಸದಸ್ಯರಾಗಿದ್ದು ವರದಿಗೆ ತಮ್ಮ ಸಹಿಹಾಕಿದ್ದಾರೆಂಬಂಶವನ್ನು ಇಲ್ಲಿ ಹೇಳಬೇಕಿದ್ದರೂ, ಹಾಗಿದ್ದರೂ ಒಂದು ಒಮ್ಮತ ಅಭಿಪ್ರಾಯ ಇರಿಸಲಿಲ್ಲ. ವಿವಿಧ ಸದಸ್ಯರುಗಳ ಭಾಷಣದ ಅಂಶಗಳು ಹಿಂದೆಯೇ ದಿನಪತ್ರಿಕೆಗಳಲ್ಲಿ ಬಂದಿರುವುದರಿಂದ ಇಲ್ಲಿ ಪ್ರಸ್ತಾಪಿಸುವುದನಗತ್ಯ.

ಮಂತ್ರಿ ಎಂ.ಪಿ. ಪಾಟೀಲರು ಚರ್ಚೆಗೆ ಉತ್ತರ ಕೊಡುತ್ತ ಸದಸ್ಯರ ಸಲಹೆಗಳನ್ನು ಗಮನದಲ್ಲಿರಿಸಿಕೊಂಡು ಸೂಕ್ತ ಮಸೂದೆ ತಯಾರಿಸಿ ಮಂಡಿಸುವುದಾಗಿ ಹೇಳಿದ್ದಾರೆ. ಆದರೆ ಕಾಂಗ್ರೆಸ್‌ನಲ್ಲೇ ಪ್ರಬಲವಾದ ಗುಂಪು ಈ ಸುಧಾರಣೆಗೆ ವಿರೋಧವಿದೆ. ಮಸೂದೆ ಯಾವ ರೂಪದಲ್ಲಿರುವುದೆಂಬುದನ್ನು ಕಾದು ನೋಡಬೇಕಿದೆ!

ಬಜೆಟ್ ಮೇಲೆ ಚರ್ಚೆ

ಈ ವರ್ಷದ ಬಜೆಟ್ಟನಲ್ಲಿ ಹಣಕಾಸಿನ ಸಚಿವರು ಅಲ್ಪ ಉಳಿತಾಯವನ್ನು ತೋರಿದ್ದಾರೆ. ಈ ಅಂಶವನ್ನು ಹೆಚ್ಚಿನ ಸದಸ್ಯರು ಸ್ವಾಗತಿಸಿದರೂ, ರಾಜ್ಯದ ಹಣ ಕಾಸಿನ ಸ್ಥಿತಿ ಇನ್ನೂ ಅಭದ್ರವಾಗಿದೆ ಎಂಬಂಶವನ್ನು ಒತ್ತಿ ಹೇಳಿದ್ದಾರೆ. ಮುಖ್ಯವಾಗಿ ಸಾರ್ವಜನಿಕ ಸಾಲದ ಹೊರೆ ಹೆಚ್ಚಾಗಿರುವುದನ್ನು, ಸಾಲದ ಮೇಲೆ ಬಡ್ಡಿಗಾಗಿ ಕೋಟ್ಯಾಂತರ ರೂಪಾಯಿಗಳು ವೆಚ್ಚವಾಗುತ್ತಿರುವ ಅಂಶವನ್ನು ಸದಸ್ಯರು ಪ್ರಸ್ತಾಪಿಸಿದ್ದಾರೆ. ಹಣಕಾಸಿನ ಸಚಿವರು ಮಂಡಿಸಿರುವ ಬಜೆಟ್ಟು 'ಬಣ್ಣದ ಗೊಂಬೆಯಂತಿದೆ', 'ಅಂಕೆ ಅಂಶಗಳ ಕಣ್ಣುಮುಚ್ಚಾಲೆಯಾಗಿದೆ' ಇತ್ಯಾದಿ ಲಘು ಟೀಕೆಗಳು ಬಂದಿವೆ.

ಆದರೆ ಚರ್ಚೆಯಲ್ಲಿ ಮುಖ್ಯವಾಗಿ ಬಂದಿರುವ ಅಂಶ ಆಡಳಿತೆಯ ಮೇಲೆ ತೀವ್ರವಾದ ಟೀಕೆ. ಆಡಳಿತೆಯಲ್ಲಿ ಕಾರ್ಮಿಕ ಇಲಾಖೆ, ಪೋಲೀಸ್ ಇಲಾಖೆಗಳ ಬಗ್ಗೆ ತೀವ್ರವಾದ ಟೀಕೆಯನ್ನು ಮಾಡಲಾಗಿದೆ. ಸಾಮಾನ್ಯ ಆಡಳಿತೆಯಲ್ಲಿ ಅಧಿಕಾರಿಗಳ ಸೀನಿಯಾರಿಟಿ ಪಟ್ಟಿ ತಯಾರಿಸುವುದರಲ್ಲಿ ಸರಕಾರವು ಗೊಂದಲವೆಬ್ಬಿಸಿರುವುದನ್ನು, ಲಂಚ-ಖುಷುವತ್ತುಗಳು, ರೆಡ್‌ಟೇಪಿಸಂ ಹೆಚ್ಚುತ್ತಿರುವುದನ್ನು ಸದಸ್ಯರು ಸರಕಾರದ ಗಮನಕ್ಕೆ ತಂದಿದ್ದಾರೆ.

ಮಂತ್ರಿಗಳು ಚರ್ಚೆಗೆ ಇತ್ತಿರುವ ಉತ್ತರಗಳು ತೀರ ಅಸಮರ್ಪಕವಾಗಿರುವುದೇ ಅಲ್ಲದೆ, ಟೀಕೆಗಳ ಬಗ್ಗೆ ಅಸಡ್ಡೆ ಮನೋಭಾವವನ್ನು ತೋರಿಸುತ್ತದೆ. ಗೃಹಸಚಿವ ಪೂಣಚ್ಚನವರು ಪೋಲೀಸು ಖಾತೆಯ ಬಗ್ಗೆ ಗಂಭೀರವಾದ ಆರೋಪಗಳಿದ್ದಾಗ್ಯೂ ಸಹ, ಅದನ್ನು ವಿಚಾರಿಸುವ ಆಶ್ವಾಸನೆಯನ್ನು ಸಹ ಕೊಡದೆ, ಸದಸ್ಯರ ಟೀಕೆಯನ್ನು ಅಲ್ಲಗಳೆದಿದ್ದಾರೆ. ಸಚಿವ ವೀರಣ್ಣ ಗೌಡರು ಮಾತನಾಡುತ್ತ ಸರಕಾರದ ದಿನನಿತ್ಯದ ಆಡಳಿತ ವ್ಯವಹಾರದಲ್ಲಿ ಶಾಸನ ಸಭಾಸದಸ್ಯರು ಪ್ರವೇಶಿಸುತ್ತಿದ್ದಾರೆಂದೂ, ಅಧಿಕಾರಿಗಳ ಮೇಲೆ ಪ್ರಭಾವ ಬೀರಿ, ಕೆಲಸಗಳನ್ನು ಮಾಡಿಸುತ್ತಿದ್ದಾರೆಂದು ಗಂಭೀರವಾದ ಆರೋಪವನ್ನು ಶಾಸನ ಸಭೆಯಲ್ಲಿ ಮಾಡಿದ್ದಾರೆ. ಮಂತ್ರಿಗಳು ಹೀಗೆ ಹೇಳಿದ್ದರಲ್ಲಿ ಅತಿಶಯವಿಲ್ಲ. ಏಕೆಂದರೆ ಅವರೆ ಇದಕ್ಕೆ ಹೆಚ್ಚಿನ ಉತ್ತೇಜನವನ್ನು ಕೊಟ್ಟದ್ದಾರೆ, ಅದರ ಫಲವನ್ನೇ ಇಂದು ಅನುಭವಿಸುತ್ತಿದ್ದಾರೆ. ಮಂತ್ರಿಗಳ ಈ ಆರೋಪ ಕಾಂಗ್ರೆಸ್ ಸದಸ್ಯರಲ್ಲಿ ಸಾಕಷ್ಟು ಕೋಪ ಉಂಟುಮಾಡಿದೆ.

ನಿಲುವಳಿ ಸೂಚನೆಗಳು

ಹಿಂದುಸ್ತಾನ ವಿಮಾನ ಕಾರ್ಖಾನೆ ನೌಕರರ ಮೇಲೆ ನಡೆದ ಗೋಲೀಬಾರಿನ ಬಗ್ಗೆ, ಬೆಂಗಳೂರಿನ ಶೇಷಾದ್ರಿಪುರಂ ಪೋಲೀಸ್ ಸ್ಟೇಷನಿನಲ್ಲಿ ಪೋಲೀಸರ ಅತ್ಯಾಚಾರದಿಂದಾಗಿ ಮೃತಳಾದಳೆಂದು ಹೇಳಲಾಗಿರುವ ಮುನಿಯಮ್ಮನ ಬಗ್ಗೆ, ಬಿಜಾಪುರ ಜಿಲ್ಲೆಯಲ್ಲಿ ಪೋಲೀಸು ಸ್ಟೇಷನ್ನಿನಲ್ಲಿ ಅಪಾದಿತನ ಮರಣವಾಯಿತೆಂಬುದರ ಬಗ್ಗೆ, ಹೀಗೆ ಹಲವು ನಿಲುವಳಿ ಸೂಚನೆಗಳು ಈ ಅಧಿವೇಶನದಲ್ಲಿ ಬಂದಿದ್ದು, ಎಲ್ಲವನ್ನೂ ಸ್ಪೀಕರ್‌ರವರು ತಳ್ಳಿಹಾಕಿದ್ದಾರೆ. ಮುನಿಯಮ್ಮನ ಸಾವಿನ ಪ್ರಕರಣದ ಮೇಲೆ ಬೇಕಾದಷ್ಟು ಚರ್ಚೆ ವಿಧಾನ ಸಭೆಯಲ್ಲಿ ಈ ಬಾರಿ ನಡೆದಿದೆ. ನಿಲುವಳಿ ಸೂಚನೆಯನ್ನು ತಳ್ಳಿಹಾಕಿದರೂ, ಈ ಪ್ರಕರಣದ ಬಗ್ಗೆ ಅಲ್ಪ ಕಾಲಾವಧಿ ಪ್ರಶ್ನೆಗೆ ಅವಕಾಶ ಕೊಡಲಾಗಿದ್ದಿತು. ಸಾರ್ವಜನಿಕರಲ್ಲಿ ಈ ಪ್ರಕರಣ ಸಾಕಷ್ಟು ಕಳವಳವನ್ನುಂಟುಮಾಡಿದೆ, ಆದರೂ ಸರಕಾರ ಈ ಬಗ್ಗೆ ಸಾರ್ವಜನಿಕ ವಿಚಾರಣೆ ನಡೆಸಲು ನಿರಾಕರಿಸಿದೆ. ವಿಮಾನ ಕಾರ್ಖಾನೆ ನೌಕರರ ಮೇಲೆ ಗೋಳೀಬಾರಿನ ಪ್ರಕರಣದ ಬಗ್ಗೆಯೂ ಸರಕಾರ ವಿಚಾರಣೆ ನಡೆಸಲು ನಿರಾಕರಿಸಿದೆ. ಪ್ರಮುಖವಾದ ವಿಚಾರಗಳ ಬಗ್ಗೆ ಜರೂರು ವಿಷಯಗಳ ಬಗ್ಗೆ ನಿಲುವಳಿ ಸೂಚನೆಗಳನ್ನು ತಳ್ಳಿಹಾಕುವುದು ಪರಂಪರೆಯಾಗಿದೆ.

ಪ್ರಶ್ನೋತ್ತರ ಕಾಲದಲ್ಲಿ ಈ ಅಧಿವೇಶನವು ನೀರಸವಾಗಿದೆಯೆಂದು ಹೇಳಬೇಕು. ಸದಸ್ಯರು ಬಹಳ ಹಿಂದೆ ಕಳಿಸಿದ ಪ್ರಶ್ನೆಗಳಿಗೆ ಈಗ ಉತ್ತರ ದೊರಕುತ್ತಿದೆ. ಅನೇಕ ಸಂದರ್ಭಗಳಲ್ಲಿ ಪ್ರಶ್ನೆಗಳು ಅವುಗಳ ಮಹತ್ವವನ್ನೇ ಕಳೆದುಕೊಂಡಿದೆ. ಒಟ್ಟಿನಲ್ಲಿ ಈಗ ನಡೆಯುತ್ತಿರುವ ಬಜೆಟ್ ಅಧಿವೇಶನವು ಸಾರ್ವಜನಿಕರಲ್ಲಿ ಉತ್ಸಾಹ ಉಂಟುಮಾಡಿಲ್ಲ ಎಂದು ಹೇಳಬಹುದು.

ಹೆಚ್. ಎ. ಎಲ್. ಮ್ಯಾನೇಜ್‌ಮೆಂಟಿನ ಕುಯುಕ್ತಿ

ವಿಮಾನ ಕಾರ್ಖಾನೆ ಮ್ಯಾನೇಜ್‌ಮೆಂಟಿನವರು ಕೆಲಸಗಾರರ ನ್ಯಾಯವಾದ ಬೇಡಿಕೆಗಳನ್ನು ನಿರಾಕರಿಸಲು, ಸಂಘವನ್ನು ಮುರಿಯಲು ತಮ್ಮ ಕುಯುಕ್ತಿಯನ್ನು ಮುಂದುವರಿಸುತ್ತಿದ್ದಾರೆ. ಸಂಘದ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸಿ ಪ್ರಶ್ನೆಗಳನ್ನು ಇತ್ಯರ್ಥಗೊಳಿಸುವುದಾಗಿ ಹೇಳಿಕೊಂಡು ತಮ್ಮ ಕೈಯ್ಯಾಳುಗಳನ್ನೊಳಗೊಂಡ ಸಂಧಾನ ಸಮಿತಿಯೊಂದರೊಂದಿಗೆ ಮಾತುಕತೆ ನಡೆಸಲು ಮ್ಯಾನೇಜ್‌ಮೆಂಟ್ ತೀರ್ಮಾನಿಸಿದೆ. ಅದರಂತೆ 16—4—58ರಿಂದ ಮಾತುಕತೆಯನ್ನಾರಂಭಿಸಿದೆ.

ಕಳೆದ ತಿಂಗಳು 26ರಂದು ನಡೆದ ಸರ್ವಸದಸ್ಯರ ಸಭೆಯಲ್ಲಿ 6000 ಮಂದಿ ನೌಕರರು ಒಮ್ಮತದಿಂದ ಸಂಘದ ಅಧಿಕಾರಿ ವರ್ಗವು ಮ್ಯಾನೇಜ್‌ಮೆಂಟನೊಂದಿಗೆ ಮಾತುಕತೆ ನಡೆಸಬೇಕೆಂದು ತೀರ್ಮಾನಿಸಿತು. ಈ ತೀರ್ಮಾನವನ್ನು ಹೇಗಾದರೂ ಮಾಡಿ ಮುರಿಯುವ ಉದ್ದಿಶ್ಯದಿಂದ ಮ್ಯಾನೇಜ್‌ಮೆಂಟಿನವರು ಲೇಬರ್ ಕಮಿಶನರ್‌ರವರಿಂದ ಸಂಘದ ಅಧಿಕಾರಿ ವರ್ಗದಲ್ಲಿ ಕೆಲಸದಿಂದ ವಜಾ ಮಾಡಲ್ಪಟ್ಟಿರುವ ನೌಕರರು ಇರಲು ಸಾಧ್ಯವಿಲ್ಲವೆಂದೂ, ಆದ್ದರಿಂದ ಸಂಧಾನ ಸಮಿತಿಯಲ್ಲಿರಲು ಸಾಧ್ಯವಿಲ್ಲವೆಂದೂ ಒಂದು ಪತ್ರವನ್ನು ಬರೆಸಿತು. ಆ ಪತ್ರದ ಆಧಾರದ ಮೇಲೆ ಈಗ ಮ್ಯಾನೇಜ್‌ಮೆಂಟು ನೌಕರರ ಬೆಂಬಲವಿಲ್ಲದ ಸಮಿತಿಯೊಂದಿಗೆ ಮಾತುಕತೆ ನಡೆಸಹೊರಟಿವೆ.

ಲೇಬರ್ ಕಮಿಶನರ್‌ರವರು ಸಂಘದ ಕಾರ್ಯಗಳಲ್ಲಿ ಈ ರೀತಿಯಾಗಿ ಮಧ್ಯೆ ಪ್ರವೇಶಿಸಿರುವುದು ಆಶ್ಚರ್ಯಕರವಾಗಿದೆ. ಕೆಲಸದಿಂದ ವಜಾ ಮಾಡಲ್ಪಟ್ಟ ಸಂಘದ ಅಧಿಕಾರಿಗಳು ಮುಂದೆ ಸಂಘದ ಚುನಾವಣೆ ನಡೆಯುವವರೆಗೂ ಮುಂದುವರಿಯುತ್ತಾರೆ. ಇದು ಘಟನೆಯಲ್ಲಷ್ಟೇ ಅಲ್ಲದೆ, ಪರಂಪರೆಯಾಗಿ ಬಂದಿರುವ ಪ್ರವೃತ್ತಿಯೂ ಆಗಿದೆ. ಅಲ್ಲದೆ ಒಮ್ಮೆ ಸಂಘದ ಅಧಿಕಾರದಲ್ಲಿರುವವರು ಇರಕೂಡದೆಂದೂ ತೀರ್ಮಾನಿಸಿ ಆದರಂತೆ ನಿರ್ದೇಶ ಕೊಡುವುದು ಸರಿಯಲ್ಲ. ಹಳೆಯ ಅಧಿಕಾರಿಗಳು ಮುಂದೆ ಬರುವವರಿಗೆ ಪೂರ್ತ ಅಧಿಕಾರ ವಹಿಸಿಕೊಡಲು ಸಾಕಷ್ಟು ಸಮಯ ಅಗತ್ಯ. ಹೀಗಿರುವಾಗ ಲೇಬರ್ ಕಮಿಶನರ್‌ರವರ ಪತ್ರ ಯಾವ ಉದ್ದಿಶ್ಯದಿಂದ ಕೊಡಿದ್ದಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಸಂಘವು ಈಗಾಗಲೇ ಲೇಬರ್ ಕಮಿಶನರ್‌ರವರ ಮತ್ತು ಮ್ಯಾನೇಜ್‌ಮೆಂಟಿನ ನೀತಿಯ ಬಗ್ಗೆ ವಿರೋಧವನ್ನು, ಪ್ರತಿಭಟನೆಯನ್ನು ವ್ಯಕ್ತಗೊಳಿಸಿದೆ. ಲೇಬರ್ ಕಮಿಶನರ್‌ರ ತೀರ್ಮಾನವನ್ನು ಪ್ರಶ್ನಿಸಿ, ಹೈಕೋರ್ಟಿನಲ್ಲಿ ಸಲ್ಲಿಸಿದ ಅರ್ಜಿಯನ್ನು ಅಂಗೀಕರಿಸಲಾಗಿದೆ ಎಂದು ತಿಳಿದು ಬಂದಿದೆ.

ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ಸಿನ ಪರಾಜಯ

ಉತ್ತರ ಪ್ರದೇಶ ವಿಧಾನ ಸಭೆಗೆ ಇತ್ತೀಚೆಗೆ ನಡೆದ ಉಪಚುನಾವಣೆಯಲ್ಲಿ ಶ್ರೀ ಸಿ. ಬಿ. ಗುಪ್ತರವರ ಸೋಲು ಕಾಂಗ್ರೆಸ್ಸಿಗೆ ಭಾರೀ ಪರಾಭವವಾಗಿದೆ. ಸಿ. ಬಿ. ಗುಪ್ತರವರು ಹಿಂದೆ ಉತ್ತರ ಪ್ರದೇಶದ ಮಂಡಲದಲ್ಲಿ ಸಚಿವರಾಗಿದ್ದರು. ಯು. ಪಿ. ಕಾಂಗ್ರೆಸ್ಸಿನಲ್ಲಿ ಪ್ರಬಲರಾದ ವ್ಯಕ್ತಿ ಎಂದು ಇವರನ್ನು ಹೇಳಲಾಗಿದೆ. ಕಳೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಲಕ್ನೋ ನಗರದ ಪೂರ್ವ ಕ್ಷೇತ್ರದಿಂದ ಸ್ಪರ್ಧಿಸಿದ್ದ ಗುಪ್ತರವರು ಪ್ರಜಾಸೋಷಲಿಸ್ಟ್ ಪಕ್ಷದ ತ್ರಿಲೋಕ ಸಿಂಗ್‌ರವರಿಗೆ 11,000 ಮತಗಳಲ್ಲಿ ಸೋತರು.

ಒಮ್ಮೆ ಸಾರ್ವತ್ರಿಕ ಚುನಾವಣೆಯಲ್ಲಿ ಸೋತಿದ್ದರೂ ಸಹ ಮತ್ತೆ ಇವರಿಗೆ ಉಪಚುನಾವಣೆಯಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಟಿಕೇಟು ಕೊಡಲಾಯಿತು. ಈ ಬಾರಿ ಹಮೀರ್‌ಪುರ ಜಿಲ್ಲೆಯ ಮೌವ್‌ಧಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಈ ಕ್ಷೇತ್ರದಲ್ಲಿ ಇರುವ ಒಟ್ಟು 81,000 ಮತದಾರರ ಪೈಕಿ ಶೇಕಡ 70ರಷ್ಟು ಹಿಂದುಳಿದ ಪಂಗಡಕ್ಕೆ ಸೇರಿದವರಾಗಿದ್ದಾರೆ.

ಗುಪ್ತರವರನ್ನು ವಿರೋಧಿಸಿ ಪಿ.ಎಸ್.ಪಿ. ಉಮೇದುವಾರರಾದ ಶ್ರೀಮತಿ ರಾಣಿ ರಾಜೇಂದ್ರಕುಮಾರಿಯವರು ಸ್ಪರ್ಧಿಸಿದ್ದರು. ಇವರ ಉಮೇದುವಾರಿಕೆಗೆ ಎಲ್ಲ ವಿರೋಧ ಪಕ್ಷಗಳು, ಕಮ್ಯೂನಿಸ್ಟ್ ಪಾರ್ಟಿಯೂ ಬೆಂಬಲವನ್ನಿತ್ತಿದ್ದಿತು. ಈ ಚುನಾವಣೆಯು ಉತ್ತರ ಪ್ರದೇಶದಲ್ಲಷ್ಟೆ ಅಲ್ಲದೆ ಇತರ ಕಡೆಗಳಲ್ಲೂ ಸಹ ತೀವ್ರ ಆಸಕ್ತಿಯನ್ನುಂಟು ಮಾಡಿದ್ದಿತು. ಸಿ. ಬಿ. ಗುಪ್ತರವರು ಚುನಾವಣೆಯಲ್ಲಿ ಹೇಗಾದರೂ ಜಯಿಸಲು ಬೇಕಾದಷ್ಟು ಹಣ ಖರ್ಚುಮಾಡಿದ್ದೇ ಅಲ್ಲದೆ, ಬೇರೆ ವಿಧಗಳಲ್ಲೂ ಯತ್ನಿಸಿದರು. ಆದರೆ ಜನತೆ ಅವರ ಮೋಸಕ್ಕೆ ಬಲಿಯಾಗಲಿಲ್ಲ. ಶ್ರೀಮತಿ ರಾಣಿ ರಾಜೇಂದ್ರಕುಮಾರಿಯವರಿಗೆ 7,100 ಮತಗಳಿಂದ ಸೋತರು. ಸಿ. ಬಿ. ಗುಪ್ತರವರಿಗೆ ಎರಡು ಬಾರಿ ಜನತೆ ತಮ್ಮ ಉತ್ತರವನ್ನು ಇತ್ತಿದ್ದಾರೆ. ಇನ್ನು ಮುಂದೆ ಅವರು ಚುನಾವಣೆಗೆ ನಿಲ್ಲುವ ಸಾಹಸ ಮಾಡಿಯಾರೆ ಎಂದು ನೋಡಬೇಕಿದೆ.

ಮಹಾಚುನಾವಣೆಗಳ ನಂತರ ಈವರೆಗೆ ನಡೆದಿರುವ ಮೂವತ್ತೊಂದು ಉಪಚುನಾವಣೆಗಳ ಪೈಕಿ ಕಾಂಗ್ರೆಸ್ 30ಸ್ಥಾನಗಳಲ್ಲಿ ಸ್ಪರ್ಧಿಸಿದ್ದಿತು. 15 ಸ್ಥಾನಗಳಲ್ಲಿ ಪರಾಭವ ಹೊಂದಿದೆ.

ಆಲ್ಜೀರಿಯ ಪ್ರಶ್ನೆಯ ಮೇಲೆ ಫ್ರೆಂಚ್ ಸರಕಾರದ ಪತನ

ಆಲ್ಜೀರಿಯ ಪ್ರಶ್ನೆಯ ಮೇಲೆ ಮತ್ತೊಂದು ಫ್ರೆಂಚ್ ಸರಕಾರ ಏಪ್ರಿಲ್ 15ರಂದು ಉರುಳಿತು. ಐದು ತಿಂಗಳುಗಳಿಂದ ಅಧಿಕಾರದಲ್ಲಿದ್ದ ಎಂ. ಗೇಲ್ಲಾರ್ಡ್ ಸರಕಾರ 66 ಮತಗಳಿಂದ ಅಪಜಯ ಹೊಂದಿತು. ಫ್ರಾನ್ಸ್ ಮತ್ತು ಟ್ಯುನೀಷಿಯದ ಸಂಬಂಧದ ಬಗ್ಗೆ ಎದ್ದಿರುವ ವಿವಾದವೇ ಪತನಕ್ಕೆ ಕಾರಣವಾಗಿದೆ

ಆಲ್ಜೀರಿಯ ಸ್ವಾತಂತ್ರ್ಯ ಯೋಧರ ಮೇಲೆ ಫ್ರೆಂಚ್ ಸಾಮ್ರಾಜ್ಯಶಾಹಿಯು ನಡೆಸುತ್ತಿರುವ ಅಮಾನುಷ ದಬ್ಬಾಳಿಕೆ ವಿಶ್ವದ ಎಲ್ಲ ಪ್ರಜಾಪ್ರಭುತ್ವವಾದಿಗಳಿಂದ ಪ್ರತಿಭಟನೆಯನ್ನೂ ಖಂಡನೆಯನ್ನೂ ತರುತ್ತಿದೆ. ಕಳೆದ ತಿಂಗಳು ಫ್ರೆಂಚ್ ವಿಮಾನಗಳು ಟ್ಯುನೀಷಿಯದ ಗಡಿಯಲ್ಲಿ ಆಲ್ಜೀರಿಯದ ಸ್ವಾತಂತ್ರ್ಯ ಯೋಧರ ಮೇಲೆ ಬಾಂಬು ಮಳೆಗರೆದು, ಟ್ಯೂನಿಷಿಯ ಹಳ್ಳಿಗಳನ್ನು ನಾಶ ಮಾಡಿತು. ಈ ಪ್ರಕರಣವು ಫ್ರೆಂಚ್ ರಾಜಕೀಯದಲ್ಲಿ ಬಿಕ್ಕಟ್ಟು ತಂದಿತು.

ಫ್ರೆಂಚ್—ಟ್ಯುನೀಷಿಯ ಸಂಬಂಧವನ್ನು ಉತ್ತಮಗೊಳಿಸಲು ಅಮೆರಿಕ ಬ್ರಿಟನುಗಳ ಯತ್ನ ವಿಫಲವಾಗಿದೆ. ಅಮೆರಿಕದ ಒತ್ತಾಯಕ್ಕೆ ಅನುಸಾರವಾಗಿ ಫ್ರೆಂಚ್ ಸರಕಾರವು ತನ್ನ ಟ್ಯುನೀಷಿಯ ನೀತಿಯನ್ನು ರೂಪಿಸಿದೆ ಎಂದು ಫ್ರೆಂಚ್ ಪಾರ್ಲಿಮೆಂಟ್ ಸದಸ್ಯರು ಆರೋಪಿಸಿದ್ದಾರೆ. ಗೇಲಾರ್ಡ್ ಸರಕಾರವು ಫ್ರೆಂಚ್—ಟ್ಯುನೀಷಿಯ ಸಂಬಂಧಗಳನ್ನು ಸರಿಪಡಿಸಲು ನೇರವಾದ ಮಾತುಕತೆ ನಡೆಸಬೇಕೆಂದು ಮಂಡಿಸಿದ ಸಲಹೆಯ ಮೇಲೆ ಉರುಳಿದೆ.

ಯುದ್ಧಾನಂತರದಲ್ಲಿ ಫ್ರಾನ್ಸಿನಲ್ಲಿ ಒಂದಾದ ಮೇಲೊಂದು ಸರಕಾರ ಪತನವಾಗುತ್ತಲೇ ಇದೆ. ತೀವ್ರವಾದ ಬಿಕ್ಕಟ್ಟಿನಲ್ಲಿರುವ ಫ್ರೆಂಚ್ ಸಾಮ್ರಾಜ್ಯಶಾಹಿ ಗೊಂದಲಪಲ್ಲಿದೆ. ವಸಾಹತುಶಾಹಿ ನೀತಿಯನ್ನು ಕೈಬಿಡುವವರೆಗೆ, ಅಮೆರಿಕಾ-ಬ್ರಿಟನ್‌ಗಳನ್ನನುಸರಿಸಿ ತನ್ನ ನೀತಿಯನ್ನು ರೂಪಿಸುವವರೆಗೆ ಫ್ರೆಂಚ್ ಸಾಮ್ರಾಜ್ಯಶಾಹಿಯ ಈ ಬಿಕ್ಕಟ್ಟು ಮುಂದುವರಿಯುತ್ತಲೇ ಇರುವುದರಲ್ಲಿ ಸಂಶಯವಿಲ್ಲ.

(೬ನೇ ಪುಟ ನೋಡಿ)

ದೆಹಲಿ ಮೇಯರ್ ಆಗಿ ಅರುಣ ಅಸಫ್ ಅಲಿ ಆಯ್ಕೆ

ದೆಹಲಿ ಮುನಿಸಿಪಲ್ ಕಾರ್ಪೊರೇಷನ್ನಿನ ಪ್ರಥಮ ಮೇಯರ್ ಆಗಿ ಶ್ರೀಮತಿ ಅರುಣ ಆಸಫ್ ಆಲಿಯವರು ಆಯ್ಕೆಯಾಗಿದ್ದಾರೆ. 86 ಕೌನ್ಸಿಲರುಗಳು ಇರುವ ಮುನಿಸಿಪಲ್ ಕಾರ್ಪೊರೇಷನ್ನಿನಲ್ಲಿ ಅರುಣ ಆಸಫ್ ಆಲಿಯವರು 57 ಮತಗಳನ್ನು ಗಳಿಸಿ, ಜನಸಂಘದ ಉಮೇದುವಾರರನ್ನು ಸೋಲಿಸಿ ಆಯ್ಕೆಯಾಗಿದ್ದಾರೆ. ಡೆಪ್ಯುಟಿ ಮೇಯರ್ ಆಗಿ ಮಾಜಿ ಕಾಂಗ್ರೆಸ್ ಸದಸ್ಯರಾಗಿದ್ದ ಸ್ವತಂತ್ರ ಸದಸ್ಯರಾದ ರಾಮಚರಣ್ ಅಗರ್‌ವಾಲ ಆಯ್ಕೆಯಾಗಿದ್ದಾರೆ.


86 ಸದಸ್ಯರಿರುವ ಮುನಿಸಿಪಲ್ ಕಾರ್ಪೊರೇಷನ್ನಿನಲ್ಲಿ ಕಾಂಗ್ರೆಸ್ 34, ಜನಸಂಘ 28, ಕಮ್ಯೂನಿಸ್ಟ್ ಪಕ್ಷ 8, ಸ್ವತಂತ್ರರು 14, ಪ್ರಜಾ ಸೋಷಲಿಸ್ಟ್ ಮತ್ತು ಸೋಷಲಿಸ್ಟರು ಒಂದೊಂದು ಸದಸ್ಯರೂ ಇದ್ದಾರೆ. ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತವಿಲ್ಲದುದರಿಂದಾಗಿ ಮೇಯರ್ ಆಯ್ಕೆಯು ದೆಹಲಿ ಪೌರರಲ್ಲಿ ಅತ್ಯಾಸಕ್ತಿಯನ್ನುಂಟುಮಾಡಿತ್ತು. ಆರುಣಾ ಆಸಫ್ ಆಲಿಯವರ ಉಮೇದುವಾರಿಕೆಗೆ ಇತರ ಎಲ್ಲ ಪಕ್ಷಗಳೂ, ಜನಸಂಘದ ಹೊರತು ಒಪ್ಪಿಗೆ ಇದ್ದರೂ ಕಾಂಗ್ರೆಸ್ ಪಕ್ಷ ನೇರವಾಗಿ ಒಪ್ಪಿಗೆ ಇತ್ತಿರಲಿಲ್ಲ. ಅರುಣಾ ಆಸಫ್ ಆಲಿಯವರಿಗೆ ಕಾಂಗ್ರೆಸ್ ಬೆಂಬಲ ಕೊಡಬೇಕಿದ್ದಲ್ಲಿ ಅವರು ಕಾಂಗ್ರೆಸ್ ಪಕ್ಷ ಸೇರಬೇಕೆಂದು ಒತ್ತಾಯವಿದ್ದಿತು. ಆದರೆ ಅದು ಸಾಧ್ಯವಾಗಲಿಲ್ಲ. ಆದ್ದರಿಂದ ಸ್ವತಂತ್ರ ಉಮೇದುವಾರರಾದ ಅರುಣಾ ಅಸಫ್ ಆಲಿಯವರಿಗೆ ಕಾಂಗ್ರೆಸ್ ಬೆಂಬಲ ನೀಡುವುದು ಅನಿವಾರ್ಯವಾಗಿ ಬಂದಿತು.

ಮೇಯರ್ ಆಯ್ಕೆಯಲ್ಲಿ ಹಾಗೂ ಡೆಪ್ಯೂಟಿ ಮೇಯರ್ ಆಯ್ಕೆಯಲ್ಲಿ ಒಂದಂಶ ಸ್ಪಷ್ಟವಾಗಿ ವ್ಯಕ್ತಗೊಂಡಿದೆ. ಅದು ಜನಸಂಘದಂಥ ಜಾತೀಯ ಸಂಸ್ಥೆಯ ವಿರೋಧವಾಗಿ ಕಾಂಗ್ರೆಸ್, ಕಮ್ಯೂನಿಸ್ಟ್ ಮತ್ತಿತರ ಪಕ್ಷಗಳು ಹಾಗೂ ಸ್ವತಂತ್ರ ಉಮೇದುವಾರರೂ ಮತವಿತ್ತಿರುವುದು. ಜನಸಂಘದ ಉಮೇದುವಾರರಿಗೆ ತಮ್ಮ ಪಕ್ಷದ ಮತವಲ್ಲದೆ ಬೇರೆ ಸಿಗಲಿಲ್ಲ.

ಭಾರತದ ರಾಜಧಾನಿಯಾದ ದೆಹಲಿ ನಗರದ ಮುನಿಸಿಪಲ್ ಕಾರ್ಪೊರೇಷನ್ನಿನ ಪ್ರಥಮ ಮೇಯರ್ ಆಗಿ ಕಾಂಗ್ರೆಸ್ಸೇತರ ಸದಸ್ಯೆ ಆಯ್ಕೆಯಾಗಿರುವುದು ಗಮನಾರ್ಹವಾಗಿದೆ.

ಪಶ್ಚಿಮ ಬಂಗಾಳ ನಿರಾಶ್ರಿತರ ಸತ್ಯಾಗ್ರಹ

ಕಳೆದ ಮಾರ್ಚ್ 17 ರಂದು ಆರಂಭವಾದ ಪಶ್ಚಿಮ ಬಂಗಾಳ ನಿರಾಶ್ರಿತರ ಸತ್ಯಾಗ್ರಹ ಮುಂದುವರಿಯುತ್ತಿದೆ. ಈವರೆಗೆ 12,500ಕ್ಕೂ ಹೆಚ್ಚು ನಿರಾಶ್ರಿತರು ಬಂಧಿತರಾಗಿದ್ದಾರೆ. ಪಶ್ಚಿಮ ಬಂಗಾಳದಲ್ಲಿರುವ 20,000 ನಿರಾಶ್ರಿತ ಸಂಸಾರಗಳು ಅಲ್ಲಿಯೇ ಪುನರ್ವ್ಯವಸ್ಥೆಯಾಗಬೇಕೆಂಬುದೇ ಅವರ ಬೇಡಿಕೆಯಾಗಿದೆ. ಪ್ರಜಾಸೋಷಲಿಸ್ಟ್ ಪಕ್ಷದ ನೇತೃತ್ವದಲ್ಲಿರುವ ಅಖಿಲ ಬಂಗಾಳ ನಿರಾಶ್ರಿತ ಸಮ್ಮೇಳನವು ಸತ್ಯಾಗ್ರಹಕ್ಕೆ ಕರೆಯಿತ್ತಿದ್ದಿತು.



ಲಂಡನ್ನಿನ ಟ್ರಫಾಲ್ಗರ್ ಚೌಕದಲ್ಲಿ ಅಣುಶಸ್ತ್ರಗಳ ಪ್ರಯೋಗದ ವಿರುದ್ಧ ಪ್ರತಿಭಟನಾ ಪ್ರದರ್ಶನದ ಒಂದು ದೃಶ್ಯ

ಕೇರಳ ದೇವಿಕುಲಂ ಕ್ಷೇತ್ರದ ಉಪಚುನಾವಣೆ

ಕೇರಳ ಕಮ್ಯೂನಿಸ್ಟ್ ಶಾಸನಸಭಾ ಸದಸ್ಯೆ ಶ್ರೀಮತಿ ರೋಸಮ್ಮ ಪೊನ್ನೂಸ್‌ರವರ ಚುನಾವಣೆಯು ಅಕ್ರಮವೆಂದು ಎಲೆಕ್ಷನ್ ಟ್ರಿಬ್ಯೂನಲ್ ತೀರ್ಪಿತ್ತಿರುವುದರಿಂದ ಮತ್ತು ಸುಪ್ರೀಂ ಕೋರ್ಟಿನಲ್ಲಿ ಅಪೀಲು ಅಂಗೀಕಾರವಾಗದಿದ್ದುದರಿಂದಲೂ ಅವರ ಸ್ಥಾನಕ್ಕೆ ಉಪಚುನಾವಣೆ ನಡೆಯಲಿದೆ. ಸಾರ್ವತ್ರಿಕ ಚುನಾವಣೆಗಳಲ್ಲಿ ರೋಸಮ್ಮ ಪೊನ್ನೂಸ್‌ರವರು ದೇವಿಕುಲಂ ಕ್ಷೇತ್ರದಿಂದ ಶಾಸನ ಸಭೆಗೆ ಆಯ್ಕೆಯಾಗಿದ್ದರು. ಉಪಚುನಾವಣೆಯು ಮುಂದಿನ ತಿಂಗಳಿನಲ್ಲಿ ನಡೆಯಲಿದೆ. ಈ ಉಪಚುನಾವಣೆ ದೇಶಾದ್ಯಂತ ಎಲ್ಲರ ಗಮನವನ್ನು ಸೆಳೆದಿದೆ ಏಕೆಂದರೆ ಈಗ ಶಾಸನ ಸಭೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿರುವ ಸರಕಾರಕ್ಕೆ ಬೆಂಬಲವಾಗಿ 63 ಸದಸ್ಯರಿದ್ದಾರೆ, ವಿರೋಧ ಪಕ್ಷಗಳ ಒಟ್ಟು ಸಂಖ್ಯೆ 62ಆಗಿದೆ. ಸಭಾಧ್ಯಕ್ಷರ ಮತವನ್ನು ಮೇಲಿನ ಸಂಖ್ಯೆಗೆ ಸೇರಿಸಿಲ್ಲ. ಆದ್ದರಿಂದ ಕಮ್ಯೂನಿಸ್ಟ್ ಸರಕಾರಕ್ಕೆ ಶಾಸನ ಸಭೆಯಲ್ಲಿ ಈಗ ಒಂದೇ ಒಂದು ಬಹುಮತವಿದೆ.

ಹೇಗಾದರೂ ಮಾಡಿ ಕಮ್ಯೂನಿಸ್ಟ್ ಉಮೇದುವಾರರನ್ನ ಈ ಕ್ಷೇತ್ರದಲ್ಲಿ ಪರಾಜಯಗೊಳಿಸಲು ಕೇರಳದಲ್ಲಿ ವಿರೋಧ ಪಕ್ಷಗಳು ಯತ್ನಿಸುತ್ತಿವೆ. ಕಾಂಗ್ರೆಸ್, ಪ್ರಜಾಸೋಷಲಿಸ್ಟ ಮತ್ತು ಮುಸ್ಲಿಂಲೀಗಿನ ಬೆಂಬಲ ಪಡೆದ ಉಮೇದುವಾರರನ್ನು ನಿಲ್ಲಿಸಿ ಚುನಾವಣೆಯಲ್ಲಿ ಸ್ಪರ್ಧಿಸುವ ಯತ್ನ ನಡೆಯುತ್ತಿದೆ. ಇದು ಎಷ್ಟು ಮಟ್ಟಿಗೆ ಸಾಧ್ಯವಾಗುವುದೆಂದು ಹೇಳುವಂತಿಲ್ಲ.

ಕೇರಳಕ್ಕೆ ಪಂಡಿತ್ ನೆಹರೂ ಭೇಟಿ

ಪ್ರಧಾನ ಮಂತ್ರಿ ಪಂಡಿತ್ ನೆಹರೂರವರು ಕೇರಳದ ಮುಖ್ಯಮಂತ್ರಿ ಇ.ಎಂ.ಎಸ್. ರವರ ಆಹ್ವಾನದ ಮೇಲೆ ಮುಂದಿನವಾರ ಕೇರಳಕ್ಕೆ ಭೇಟಿಕೊಡಲಿದ್ದಾರೆ. ಪಂಡಿತ ನೆಹರೂರವರು ಏಪ್ರಿಲ್ 24ರಿಂದ 28ರವರೆಗೆ ನಾಲ್ಕು ದಿನಗಳ ಕಾಲ ಕೇರಳದಲ್ಲಿ ಪ್ರವಾಸ ನಡೆಸಲಿದ್ದಾರೆ.

ಸರಕಾರ ಮತ್ತು ಜನತೆ—ಒಂದು ಹೊಸ ದೃಷ್ಟಿ

(ಕಳೆದ ಸಂಚಿಕೆಯಿಂದ)

ಶಾಸನ ಕ್ರಮಗಳು

ಹೊಲದಿಂದ ರೈತನನ್ನು ಹೊರದೂಡುವುದನ್ನು ತಡೆಗಟ್ಟುವ ಕಾಯಿದೆ ಮಾತ್ರವಲ್ಲದೆ ಕೇರಳ ಶಾಸನ ಸಭೆಯು ಈ ಕೆಳಗಿನ ಮಸೂದೆಗಳನ್ನು ಅನುಮೋದಿಸಿದೆ.

—ಕೇರಳ ವಿದ್ಯಾಭ್ಯಾಸ ಮಸೂದೆ (ಕೇಂದ್ರ ಸರಕಾರ ಇದನ್ನು ಸುಪ್ರೀಂಕೋರ್ಟಿಗೆ ಒಪ್ಪಿಸಿದೆ);

—ಕೇರಳ ವಿಶ್ವವಿದ್ಯಾನಿಲಯ ಕಾಯಿದೆ;

—ಕೇರಳ ಹೆಂಗೆ ಸೌಲಭ್ಯ ಕಾಯಿದೆ; ಮತ್ತು

—ಖಾಸಗಿ ಅರಣ್ಯ ನಿರ್ವಾಹಕ ಕಾಯಿದೆ;

ಈ ಕೆಳಗಿನ ಮಸೂದೆಗಳು ಶಾಸನ ಸಭೆಯಲ್ಲಿ ಮಂಡಿತವಾಗಿ ಚರ್ಚೆಯಾಗುತ್ತಿದೆ:

—ವ್ಯವಸಾಯಗಾರರ ಸಾಲದ ಪರಿಹಾರ ಮಸೂದೆ;

—ಜೆನ್ಮಿಕಾರಮ್ (ಒಂದು ಬಗೆ ಜಮೀನುದಾರಿ) ರದ್ದಿಯಾತಿ ಮಸೂದೆ;

—ಸಾಲಗಾರರನ್ನು ಹತೋಟಿಯಲ್ಲಿಡುವ ಮಸೂದೆ;

—ವರದಕ್ಷಿಣೆ ರದ್ದಿಯಾತಿ ಮಸೂದೆ; ಮತ್ತು

—ಕೇರಳ ಭೂಸುಧಾರಣಾ ಮಸೂದೆ.

ಪ್ರಜಾಪ್ರಭುತ್ವವಾದ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳನ್ನು ತರುವ ದೃಷ್ಟಿಯಿಂದ ಸರಕಾರವು ತಂದಿರುವ ಈ ಕಾಯಿದೆ ಮತ್ತು ಮಸೂದೆಗಳ ಬಗ್ಗೆ ವಿವರ ಅನಗತ್ಯ.

ರಾಜ್ಯದಲ್ಲಿರುವ ನೀರಾವರಿ ಸಂಪತ್ತನ್ನು ರೂಢಿಸಲು, ಅಭಿವೃದ್ಧಿಗೊಳಿಸಲು ಅನೇಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ನೀರಾವರಿ, ವಿದ್ಯುಚ್ಛಕ್ತಿ, ನಾವಿಕ ಸಾರಿಗೆ ಮತ್ತಿತರ ಸೌಲಭ್ಯಗಳನ್ನು ರಾಜ್ಯದಲ್ಲಿರುವ 26 ನದಿಗಳಿಂದ ಒದಗಿಸಲು ತಕ್ಕ ಯೋಜನೆಯ ತಯಾರಿಕೆ ಮುಗಿಯುತ್ತ ಬಂದಿದೆ.

ಯೋಜನಾ ಆಯೋಗದ ಮೇಲೆ ಸೂಕ್ತ ಒತ್ತಾಯವನ್ನು ತಂದು ಕೇರಳ ಸರಕಾರವು ಮೂರು ಮುಖ್ಯವಾದ ದೊಡ್ಡ ನೀರಾವರಿ ಯೋಜನೆಗಳನ್ನು (ಕಟ್ಟಂಪಳ್ಳಿ, ಪೋತುಂಡಿ ಮತ್ತು ತಣ್ಣೀರ್‌ಮುಕಮ್) ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದೆ ಮತ್ತು ಕಾರ್ಯ ಆರಂಭವಾಗಿದೆ.

ಕಳೆದ ವರ್ಷ ರಾಜ್ಯದಲ್ಲಿ ಅನೇಕ ಸಣ್ಣ ಪುಟ್ಟ ನೀರಾವರಿ ಯೋಜನೆಗಳನ್ನು ವಿವಿಧ ಭಾಗಗಳಲ್ಲಿ ಕೈಗೊಳ್ಳಲಾಗಿದೆ.

ವಿದ್ಯಾಭ್ಯಾಸ ಕ್ಷೇತ್ರದಲ್ಲ ಉಪಾಧ್ಯಾಯರುಗಳ ಸಂಬಳವನ್ನು ಹೆಚ್ಚಿಸಿದ್ದೇ ಅಲ್ಲದೆ, 14 ವಯಸ್ಸಿನ ವರೆಗೆ ಎಲ್ಲ ವಿದ್ಯಾರ್ಥಿಗಳಿಗೂ ಉಚಿತ ವಿದ್ಯಾಭ್ಯಾಸ ಕೊಡುವ ಮತ್ತು ಮುಂದಿನ ಐದು ವರ್ಷಗಳ ಅವಧಿಯಲ್ಲಿ ಎಲ್ಲ ಮಕ್ಕಳಿಗೂ ಕಡ್ಡಾಯದ ಮತ್ತು ಉಚಿತ ಶಿಕ್ಷಣವನ್ನು ಕೊಡುವ ಕ್ರಮವನ್ನು ಕೈಗೊಳ್ಳಲಾಗಿದೆ. ಮಧ್ಯಾಹ್ನದ ಹೊತ್ತು ಪ್ರಾಥಮಿಕ ಶಾಲಾ ಮಕ್ಕಳಿಗೆ ಗಂಜಿಕೊಡುವ ಕಾರ್ಯವನ್ನು ಒಂದು ಲಕ್ಷ ರೂಪಾಯಿ ವೆಚ್ಚದಲ್ಲಿ ಮೂರು ಜಿಲ್ಲೆಗಳಲ್ಲಿ ತರಲಾಗಿದೆ, ಉಳಿದ ಜಿಲ್ಲೆಗಳಲ್ಲಿ ಮುಂದಿನ ವರುಷಗಳಲ್ಲಿ ತರಲಾಗುವುದು. ಕೋಳಿಕೋಡ್‌ನಲ್ಲಿ ಒಂದು ಮೆಡಿಕಲ್ ಕಾಲೇಜ್, ತ್ರಿಚೂರಿನಲ್ಲಿ ಒಂದು ಎಂಜಿನಿಯರಿಂಗ್ ಕಾಲೇಜ್, ಖಾಸಗೀ ಕ್ಷೇತ್ರದಲ್ಲಿ ಮೂರು ಎಂಜಿನಿಯರಿಂಗ್ ಕಾಲೇಜ್‌ಗಳು, ಪ್ರತಿ ಜಿಲ್ಲೆಯಲ್ಲಿಯೂ ಒಂದು ತಾಂತ್ರಿಕ ಶಿಕ್ಷಣ ಶಾಲೆ ಮತ್ತು 18 ಜೂನಿಯರ್ ತಾಂತ್ರಿಕ ಶಾಲೆಗಳನ್ನು ತೆರೆಯುವುದರ ಮೂಲಕ ತಾಂತ್ರಿಕ ಶಿಕ್ಷಣವನ್ನು ಅಭಿವೃದ್ಧಿಗೊಳಿಸಲಾಗಿದೆ.

ನ್ಯೂನತೆಗಳು ಮತ್ತು ಲೋಪದೋಷಗಳು

ನಾನು ಕೇರಳದಲ್ಲಿ ಕಮ್ಯೂನಿಸ್ಟ್ ನೇತೃತ್ವದಲ್ಲಿರುವ ಸರಕಾರವು ಒಂದು ವರ್ಷದಲ್ಲಿ ಸಾಧಿಸಿರುವ ಮುಖ್ಯವಾದ ಅಂಶಗಳನ್ನು ಮಾತ್ರ ಇಲ್ಲಿ ಹೇಳಿದ್ದೇನೆ. ಇತರೇ ಯಾವ ಸರಕಾರವೂ ಇಷ್ಟು ಹೇಳಿಕೊಳ್ಳಲು ಸಾಧ್ಯವಿಲ್ಲ.

ಹಾಗೆಂದ ಮಾತ್ರಕ್ಕೆ ನ್ಯೂನತೆಗಳು ಮತ್ತು ಲೋಪದೋಷಗಳು ಇಲ್ಲವೆಂದಲ್ಲ. ಕಮ್ಯೂನಿಸ್ಟ್ ಪಾರ್ಟಿ ಮತ್ತು ಕೇರಳ ಸರಕಾರ ಇದನ್ನು ಅರಿತಿದೆ.

ಸರಕಾರವು ಇನ್ನೂ ಆಡಳಿತೆಯನ್ನು ಸರಿದೂಗಿಸುವುದರಲ್ಲಿ, ಮಂದಗತಿ (ರೆಡ್‌ಟೇಪಿಸಂ)ಯನ್ನು ತೊಡೆದುಹಾಕುವುದರಲ್ಲಿ, ಲಂಚ ನಿರ್ಮೂಲ ಮಾಡುವುದರಲ್ಲಿ ಮತ್ತು ನಮ್ಮ ಪಂಚ ವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ಅಗತ್ಯವಿರುವ ಮತ್ತು ಜನತೆಯು ಬಯಸುವ ಕಾರ್ಯ ಸಾಮರ್ಥ್ಯವನ್ನುಂಟುಮಾಡಲು ಇನ್ನೂ ಹಿಂದುಳಿದಿದೆ ಎಂದು ನಾವು ಬಹಿರಂಗವಾಗಿ ಒಪ್ಪಿಕೊಂಡಿದ್ದೇವೆ.

ಕಳೆದ ವರ್ಷ ವಿನಾಸಲಾಗಿರಿಸಿದ್ದ ಹಣವನ್ನು ಪೂರ್ಣವಾಗಿ ಬಳಸಲು ಸಾಧ್ಯವಾಗದಿದ್ದುದರಲ್ಲಿ ಮತ್ತು ಯೋಜನೆಯ ಕಾರ್ಯಕ್ರಮಗಳಿಗೆ ಇದನ್ನು ಬಳಸಲಾಗದಿದ್ದುದರಲ್ಲಿ ಈ ಅಂಶವನ್ನು ಕಾಣಬಹುದು.

ಲಕ್ಷಾಂತರ ಮಂದಿಗೆ ಉದ್ಯೋಗ ದೊರಕಿಸಿಕೊಡುವ ಕಾರ್ಯ (ತೆಂಗಿನ ನಾರು), ಕೇಷುನಟ್ (ಗೇರುಬೀಜ) ಮತ್ತು ಮೀನುಗಾರಿಕೆಯನ್ನು ಪುನರುಜ್ಜೀವನಗೊಳಿಸಲು ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಳ್ಳಲು ಸರಕಾರಕ್ಕೆ ಆಗಿಲ್ಲ ಎಂಬುದನ್ನು ನಾವು ಒಪ್ಪಿಕೊಂಡಿದ್ದೇವೆ.

ಕಳೆದ ವರ್ಷದಲ್ಲೇ ಕೆಲವು ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಧ್ಯವಾಗುವುದು ಎಂದು ಉತ್ಸಾಹದಲ್ಲಿ ಹೇಳಿದುದು ವಾಸ್ತವ ಪರಿಸ್ಥಿತಿಯಿಂದ ದೂರವಾಗಿದೆ ಎಂದು ಅನುಭವವು ತೋರಿಸಿಕೊಟ್ಟಿದೆ. ಆದರೂ ಈ ಕ್ಷೇತ್ರದಲ್ಲಿ ಕೆಲವು ಸಾಧ್ಯವಾಗಿದೆ.

—63 ಕೈಗಾರಿಕೆಗಳಿಗೆ ಕೈಗಾರಿಕೆಗಳ ಸಹಾಯಕ್ಕೆ ಇರುವ ಕಾಯಿದೆಗನುಸಾರ 11½ ಲಕ್ಷ ರೂಪಾಯಿ ಗ್ರಾಂಟ್ ಕೊಡಲಾಗಿದೆ.

ಸಿ. ಉನ್ನಿರಾಜ

—ಖಾಸಗೀ ಕೈಗಾರಿಕೋದ್ಯಮಗಳಲ್ಲಿ 50 ಲಕ್ಷ ರೂ.ಗಳ ಷೇರುಗಳನ್ನು ತೆಗೆದುಕೊಳ್ಳಲಾಗಿದೆ;

—ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲು ಆರು ಹೊಸ ಕೈಗಾರಿಕಾ ಸಹಕಾರ ಸಂಸ್ಥೆ ಆರಂಭಿಸಲಿಕ್ಕೆ 7½ ಲಕ್ಷ ರೂ. ಸಾಲ ಮತ್ತು ಗ್ರಾಂಟ್ ಕೊಡಲಾಗಿದೆ;

—ಪ್ರಭುತ್ವ ಕ್ಷೇತ್ರದಲ್ಲಿ ತ್ರಿವಾಂಡ್ರಂನಲ್ಲಿ ಹತ್ತಿ ಗಿರಣಿ ಸ್ಥಾಪಿಸಲು ಸ್ಥಳ ತೆಗೆದುಕೊಳ್ಳಲಾಗಿದೆ ಮತ್ತು ಯಂತ್ರಗಳನ್ನು ತರಿಸಲು ಸಿದ್ಧತೆ ಮಾಡಲಾಗಿದೆ;

—ಸರಕಾರವೇ ಪೂರ್ಣವಾಗಿ ಷೇರುಗಳನ್ನು ಕೊಂಡು ಸೈಕಲ್ ತಯಾರಿಕೆ ಕಾರ್ಖಾನೆ—ವರ್ಷಕ್ಕೆ ೨೦,೦೦೦ ಸೈಕಲ್ ತಯಾರಿಸುವಂಥದ್ದು—ಆರಂಭಿಸಲು ಪ್ರಭುತ್ವ ಕ್ಷೇತ್ರದಲ್ಲಿ ಪ್ರೈವೇಟ್ ಲಿಮಿಟೆಡ್ ಕಂಪೆನಿಯನ್ನು ಸ್ಥಾಪಿಸಲಾಗಿದೆ.

ಆದರೆ, ಕೇರಳ ಸರಕಾರದ ಬಗ್ಗೆ ತಿಳಿಯಬೇಕಾದ ಮತ್ತು ಅದರ ಕಾರ್ಯದ ಬಗ್ಗೆ ಹೇಳಬೇಕಾದ ವಿಷಯ, ಜನತೆಯ ಬಗ್ಗೆ ಮತ್ತು ಅವರ ಸಮಸ್ಯೆಗಳ ಬಗ್ಗೆ, ರಾಷ್ಟ್ರೀಯ ಪುನರ್ನಿರ್ಮಾಣದ ಬಗ್ಗೆ ಇರುವ ಹೊಸ ದೃಷ್ಟಿ.

ಲಕ್ಷಾಂತರ ದುಡಿಯುವ ಜನತೆಯನ್ನು ಪ್ರತಿನಿಧಿಸುವ ಸರಕಾರದಿಂದ ಮಾತ್ರವೇ ಪ್ರಜಾಪ್ರಭುತ್ವ ಸುಧಾರಣೆಗಳನ್ನು ತರಲು ಆಡಳಿತೆಯನ್ನು ಸಜ್ಜುಗೊಳಿಸಲು, ಲಂಚ ನಿರ್ಮೂಲ ಮಾಡಲು, ಮಂದಗತಿ ಮತ್ತು ಅಧಿಕಾರಶಾಹಿಯ ಅಸಮರ್ಥತೆಯನ್ನು ನೀಗಿಸಲು, ಸಾಧ್ಯವೆಂದು ಕಮ್ಯೂನಿಸ್ಟ್ ಪಾರ್ಟಿ ಮೊದಲಿನಿಂದಲೂ ಹೇಳುತ್ತಿದೆ. ಅಂಥ ಸರಕಾರದಿಂದ ಮಾತ್ರವೇ ಜನತೆಯಲ್ಲಿ ಕ್ರಿಯಾತ್ಮಕ ಶಕ್ತಿ ಮತ್ತು ದುಡಿಯುವ ಉತ್ಸಾಹವನ್ನು ಮೂಡಿಸಲು ಮತ್ತು ರಾಷ್ಟ್ರೀಯ ಪುನರ್ನಿರ್ಮಾಣ ಕಾರ್ಯವನ್ನು ನಿರ್ವಹಿಸಲು ಅವರನ್ನು ಒಂದುಗೂಡಿಸಲು ಸಾಧ್ಯ ಎಂದು ಹೇಳುತ್ತಿದೆ.

ಜನತೆಯ ಕ್ರಿಯಾತ್ಮಕ ಶಕ್ತಿ ಮತ್ತು ದುಡಿಯುವ ಉತ್ಸಾಹವನ್ನು ಹೊರಹೊಮ್ಮಿಸಲು, ಯೋಜನಾ ಆಯೋಗ ಮತ್ತು ಅದರ ಭೂಸುಧಾರಣಾ ಮಂಡಲ ಸೂಚಿಸಿರುವಂಥ ಮೂಲಭೂತ ಸುಧಾರಣೆಗಳನ್ನು ತರಬೇಕು; ಬಹಳ ಹಿಂದಿನಿಂದ ಉಳಿದಿರುವ ಮತ್ತು ನ್ಯಾಯವಾದ ಕಾರ್ಮಿಕರ ಬೇಡಿಕೆಗಳನ್ನು ಪೂರೈಸಬೇಕು; ಯೋಜನೆಯನ್ನು ರೂಪಿಸುವುದರಲ್ಲಿ ಮತ್ತು ಅಮಲಿಗೆ ತರುವುದರಲ್ಲಿ ಜನತೆಯ ಸಕ್ರಿಯ ಸಹಕಾರವನ್ನು ಪಡೆಯಲು ಕ್ರಮ ವಹಿಸಬೇಕು; ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ಗೌರವಿಸಬೇಕು ಮತ್ತು ಅವನ್ನು ವಿಸ್ತರಿಸಬೇಕು.

ಕೇರಳ ಸರಕಾರವು ತೆಗೆದುಕೊಳ್ಳುತ್ತಿರುವ ಎಲ್ಲ ಕ್ರಮಗಳಿಗೂ ಇದೇ ಮೂಲವಾದ ದೃಷ್ಟಿಯಾಗಿದೆ.

ಸ್ವಹಿತಸಾಧಕರು ಮತ್ತು ವಿರೋಧ ಪಕ್ಷಗಳ ಪ್ರಮುಖ ತಂಡಗಳು "ಕಮ್ಯೂನಿಸ್ಟ್ ಅಧಿಕಾರಶಾಹಿಯನ್ನು ಸ್ಥಾಪಿಸಲು ಯತ್ನ" ಎಂದು ಹೇಳಿಕೊಂಡು ಅವ್ಯಾಹತವಾಗಿ ಮತ್ತು ದೃಢವಾಗಿ ಎದುರಿಸುತ್ತಿರುವುದು ಈ ಧೋರಣೆಯನ್ನೇ.

ಈ ಧೋರಣೆಯನ್ನು ಮತ್ತು ಈ ಬಗ್ಗೆ ವಿರೋಧ ಪಕ್ಷಗಳ ಧೋರಣೆಯನ್ನು ವಿಶಿಷ್ಟವಾಗಿ ಪರಿಶೀಲಿಸೋಣ.

ಮೊದಲನೆಯದು, ಜನತೆಗೆ ನಮ್ಮ ರಾಜ್ಯಾಂಗ ಘಟನೆಯಲ್ಲಿ ಆಶ್ವಾಸನೆ ಇತ್ತಿರುವ ಪ್ರಜಾಪ್ರಭುತ್ವ ಸ್ವಾತಂತ್ರ್ಯವನ್ನು ಗೌರವಿಸುವ ಮತ್ತು ವಿಸ್ತರಿಸುವ ನೀತಿ.

ಈ ಹೊಸ ನೀತಿಯು ಪೋಲೀಸರನ್ನು ನಿರುತ್ಸಾಹಿಗಳಾಗಿ ಮಾಡುತ್ತದೆ, ಅವರನ್ನು ರಾಜಕೀಯ ಕಾರ್ಯಕ್ಕೆ ಬಳಸಲಾಗುತ್ತದೆ ಮತ್ತು ಇದರಿಂದ ಕಾನೂನು ಮತ್ತು ಶಿಸ್ತು ಪರಿಪಾಲನೆಗೆ ಧಕ್ಕೆ ಬರುತ್ತದೆ ಎಂದೆಲ್ಲ ಆರಂಭದಿಂದಲೂ ವಿರೋಧಿಸಲಾಯಿತು. ಸ್ಥಳೀಯ ನಾಯಕರಷ್ಟೆ ಅಲ್ಲದೆ ಅಖಿಲ ಭಾರತ ಕಾಂಗ್ರೆಸ್ ಮತ್ತು ಪ್ರಜಾ ಸೋಷಲಿಸ್ಟ್ ನಾಯಕರುಗಳೂ, ಅಶೋಕ ಮೆಹ್ತಾ, ಶ್ರೀಮನ್ನಾರಾಯಣ ಮೊದಲಾದವರೂ ಇದೇ ಪ್ರಚಾರದಲ್ಲಿ ತೊಡಗಿದರು.

ಇದರ ಅರ್ಥವೇನು? ಅವರಿಗೆ ಪೋಲೀಸರು ಹಿಂದಿನಂತೆ ವರ್ತಿಸುವುದು ಬೇಕಿತ್ತು, ಅಂದರೆ ದುಡಿಯುವ ಜನರ ನ್ಯಾಯವಾದ ಹೋರಾಟವನ್ನು ತುಳಿಯಲು ಬಂಡವಾಳ ಶಾಹಿಗಳು ಮತ್ತು ಭೂಮಾಲಿಕರ ಪರ ಅವರು ಪ್ರವೇಶಿಸಬೇಕಿತ್ತು.

ಕೇರಳದಲ್ಲಿ, ಕಾಂಗ್ರೆಸ್ ಆಡಳಿತೆಯುಳ್ಳ ಇನ್ನಾವ ರಾಜ್ಯದಲ್ಲೂ ಇಲ್ಲದಷ್ಟು ಸ್ವಾತಂತ್ರ್ಯವು ವಿರೋಧ ಪಕ್ಷಗಳಿಗೆ ಈ ಹೊಸ ನೀತಿಯಿಂದ ಇದೆ ಎಂಬಂಶವನ್ನು ಅವರು ಗಮನಿಸಲಿಲ್ಲ. ಆದರೆ, ಅವರು ಈ ಸ್ವಾತಂತ್ರ್ಯವನ್ನು ಘರ್ಷಣೆ ತರುವ ಹೋರಾಟಗಳು, ಕಾನೂನು ಭಂಗ ಚಟುವಟಿಕೆಗಳು, ಹಿಂಸಾತ್ಮಕ ದೃಷ್ಟಿಯುಳ್ಳ ಪ್ರದರ್ಶನಗಳು ಮತ್ತು ಸಶಸ್ತ್ರ ತಂಡಗಳನ್ನು ಸಜ್ಜುಗೊಳಿಸಲು ಉಪಯೋಗಿಸಿಕೊಂಡುವು.

ಸರಕಾರವು ಇಂಥ ಚಟುವಟಿಕೆಗಳನ್ನು ಪ್ರತಿಬಂಧಿಸಲೇ ಬೇಕಾಗಿ ಬಂದಾಗ, ಅವರು ಪೋಲೀಸು ದಬ್ಬಾಳಿಕೆ ಎಂದು ಅರಚಲು ಆರಂಭಿಸಿದರು!

ವಿರೋಧ ಪಕ್ಷಗಳ ಪಾತ್ರ

ಈಗ, ವಿರೋಧ ಪಕ್ಷದ ನಾಯಕರುಗಳಾದ ಪಿ. ಟಿ. ಚಾಕೊ (ಕಾಂಗ್ರೆಸು) ಮತ್ತು ಥಾನು ಪಿಳ್ಳೆ (ಪಿ. ಎಸ್. ಪಿ.) ಯಂಥವರು, ಬಂಡವಾಳಶಾಹಿಗಳು ಮತ್ತು ಭೂಮಾಲಿಕರು ಕೆಲಸಗಾರರ ನ್ಯಾಯವಾದ ಬೇಡಿಕೆಗಳನ್ನು ನಿರಾಕರಿಸಲು, ತಮ್ಮ ಜಮೀನಿನಿಂದ ರೈತರನ್ನು ಬಲಾತ್ಕಾರವಾಗಿ ಹೊರಹಾಕಲು ಅಥವಾ ವ್ಯವಸಾಯ ಕೂಲಿಗಾರರಿಗೆ ಕನಿಷ್ಟ ಕೂಲಿ ನಿರಾಕರಿಸಲು ಪೋಲೀಸರ ಸಹಾಯ ದೊರಕುವುದು ಸಾಧ್ಯವಿಲ್ಲದಿರುವುದರಿಂದ ಖಾಸಗೀ ಸಶಸ್ತ್ರ ಗೂಂಡಾ ತಂಡಗಳನ್ನು ಆತ್ಮರಕ್ಷಣೆಯ ಹೆಸರಿನಲ್ಲಿ ಸಂಘಟಿಸಿಕೊಳ್ಳಲು ಹಕ್ಕಿದೆ ಎಂದು, ಅವರನ್ನು ಎತ್ತಿಹಿಡಿಯುತ್ತಿದ್ದಾರೆ.

(೮ನೇ ಪುಟ ನೋಡಿ)

ಕಮ್ಯೂನಿಸ್ಟ್ ಪಾರ್ಟಿಯ ಹೊಸ ಘಟನಾವಳಿ

ಡಾ|| ಅಧಿಕಾರಿ

ಭಾರತ ಕಮ್ಯೂನಿಸ್ಟ್ ಪಕ್ಷದ ವಿಶೇಷ ಅಧಿವೇಶನದಲ್ಲಿ ಡಾ| ಜಿ. ಅಧಿಕಾರಿಯವರು ಏಪ್ರಿಲ್ 7ರಂದು ಪಕ್ಷದ ಹೊಸ ಘಟನೆಯನ್ನು ಮಂಡಿಸುತ್ತ, ನೂತನ ಘಟನಾವಳಿಯಲ್ಲಿ ಮಾಡಲಾಗಿರುವ ಬದಲಾವಣೆಗಳ ಮಹತ್ವವನ್ನು ಕುರಿತು ವಿವರಿಸಿದರು. ಅವರ ಭಾಷಣದ ಸಾರಾಂಶವನ್ನಿಲ್ಲಿ ಕೊಡಲಾಗಿದೆ.

ಆರಂಭದಲ್ಲಿ ಡಾ| ಅಧಿಕಾರಿಯವರು ಮಾತನಾಡುತ್ತ ಕೆಲವು ದೊಡ್ಡ ಬದಲಾವಣೆಗಳನ್ನು ಮಾಡಲಾಗಿದ್ದರೂ ಪ್ರಸ್ತಾವನೆ ಮತ್ತು ಘಟನಾವಳಿಗಳಿಗೆ ಆಧಾರವಾಗಿರುವ ಮೂಲ ತತ್ವಗಳಲ್ಲಿ ಬದಲಾವಣೆ ಇಲ್ಲ, ಎಂದು ತಿಳಿಸಿದರು.

ಕಮ್ಯೂನಿಸ್ಟ್ ಪಾರ್ಟಿಯು ಕಾಂಗ್ರೆಸ್ಸಿಗೆ ಪ್ರಬಲವಾದ ಎದುರಾಳಿಯಾಗಿದೆ, ಕಾಂಗ್ರೆಸ್ಸಿನ ಜನವಿರೋಧಿ ನೀತಿಗಳ ವಿರುದ್ಧ ಹೋರಾಡುತ್ತಿರುವ ಎಲ್ಲ ಪ್ರಜಾಪ್ರಭುತ್ವ ಮತ್ತು ಪುರೋಗಾಮಿ ಶಕ್ತಿಗಳನ್ನು ಒಂದುಗೂಡಿಸುವ ಶಕ್ತಿಯಾಗಿ ಬೆಳೆಯುತ್ತಿದೆ ಎಂದು ಪರಿಗಣಿಸಲಾಗಿದೆ.

ಬದಲಾವಣೆಗಳು ಪಾರ್ಟಿಯ ರಾಷ್ಟ್ರೀಯ ಮತ್ತು ಜನಪ್ರಿಯತೆಯನ್ನು ಒತ್ತಿ ಹೇಳುತ್ತ ವಿಚಾರದಲ್ಲಿ ಅದು ಇನ್ನೂ ಹೆಚ್ಚು ಕಮ್ಯೂನಿಸ್ಟ್ ಆಗಿ ಇದೆ ಎಂದು ಡಾ|| ಅಧಿಕಾರಿಯವರು ಘೋಷಿಸಿದರು.

ಹೊಸ ಪರಿಸ್ಥಿತಿಯ ಅವಶ್ಯಕತೆಗಳು ಮತ್ತು ಅದರಿಂದ ಉದ್ಭವಿಸಿರುವ ಕೇಳಿಕೆಗಳನ್ನು ವಿವರಿಸುತ್ತ ಅಧಿಕಾರಿಯವರು—ವರ್ಗಶಕ್ತಿಗಳು ಒಂದುಗೂಡುತ್ತಿದ್ದು, ಕಳೆದ ವರ್ಷಗಳಲ್ಲಿ ಸಾಮೂಹಿಕವಾಗಿ ಪರಿವರ್ತನೆಯಾಗಿದೆ ಮತ್ತು ತತ್ಪರಿಣಾಮವಾಗಿ ಕಮ್ಯೂನಿಸ್ಟ್ ಪಾರ್ಟಿಯು ನಮ್ಮ ದೇಶದ ರಾಜಕೀಯ ಜೀವನದಲ್ಲಿ ಪ್ರಮುಖವಾದ ರಾಜಕೀಯ ಶಕ್ತಿಯಾಗಿ ಬೆಳೆದಿರುವುದರಲ್ಲಿ ವ್ಯಕ್ತವಾಗಿದೆ; ಕಳೆದ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶವು ಇದಕ್ಕೆ ನಿದರ್ಶನವಾಗಿದೆ ಎಂದು ತಿಳಿಸಿದರು.

ಚುನಾವಣೆಗಳ ನಂತರದಲ್ಲಿ ಈ ಕ್ರಮವು ಮುಂದುವರಿದಿದೆ ಮತ್ತು ಕಾರ್ಮಿಕರ, ರೈತರ, ಉಪಾಧ್ಯಾಯರುಗಳ, ವಿದ್ಯಾರ್ಥಿಗಳ, ಸರಕಾರಿ ನೌಕರರ ಮತ್ತು ಇತರರ ಹೋರಾಟಗಳಲ್ಲಿ ಸಾಮೂಹಿಕ ಐಕ್ಯ ಹೋರಾಟಗಳಲ್ಲಿ ಇದು ವ್ಯಕ್ತಗೊಂಡಿದೆ. ಇವೆಲ್ಲವೂ ಜನಸಮೂಹಗಳು ಎಡಪಕ್ಷಗಳೆಡೆಗೆ ಸರಿಯುತ್ತಿರುವುದಲ್ಲದೆ, ಹೆಚ್ಚು ಹೆಚ್ಚಾಗಿ ಕಮ್ಯೂನಿಸ್ಟ್ ಪಕ್ಷವನ್ನು ಎಡಪಕ್ಷಗಳು ಮತ್ತು ತಮ್ಮ ಆಶ್ರಯಗಳನ್ನು ಪಡೆಯಲು ಹೋರಾಡುತ್ತಿರುವ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಗೂಡಿಸುವ ಶಕ್ತಿಯೆಂದು ನೋಡುತ್ತಿವೆ ಎಂಬುದು ವ್ಯಕ್ತವಾಗುತ್ತದೆ.

ಸಾಮೂಹಿಕ ಪಾರ್ಟಿ ಜರೂರು ಅವಶ್ಯಕತೆ

ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಕಮ್ಯೂನಿಸ್ಟ್ ಪಾರ್ಟಿಯ ಸಂಖ್ಯಾ ಮತ್ತು ಸಂಘಟನಾ ಬಲದ ನ್ಯೂನತೆಯು ಎದ್ದು ಕಾಣುತ್ತದೆ. ಇದರಿಂದಾಗಿ ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿ ಸಂಘಟನೆಯು ಪ್ರಕ್ರಿಯೆಯು ಅತಿ ಮುಖ್ಯವಾದ ಮತ್ತು ಅತಿ ಜರೂರಾದ ಕಾರ್ಯವಾಗಿದೆ. ಹಾಗಿಲ್ಲದಿದ್ದಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ಮುಂದುವರಿಯಲಾಗಲೀ ಅಥವಾ ಈಗ ಗಳಿಸಿರುವ ವಿಜಯಗಳನ್ನು ದೃಢಗೊಳಿಸಲಾಗಲೀ ಸಾಧ್ಯವಾಗುವುದಿಲ್ಲ.

ಹತ್ತಾರು ಸಾವಿರ ಹೊಸ ಪಾರ್ಟಿ ಸದಸ್ಯರುಗಳನ್ನು ಸೇರಿಸಲು ಪರಿಸ್ಥಿತಿಯು ಪಕ್ವವಾಗಿದೆ. ಪಾರ್ಟಿಯ ಜೊತೆಯಲ್ಲಿ ಅನೇಕ ಹೋರಾಟಗಳನ್ನು ನಡೆಸಿರುವ ಮತ್ತು ಅನೇಕ ಸಂಯುಕ್ತ ಕಾರ್ಯಾಚರಣೆಗಳಲ್ಲಿ ಪಾರ್ಟಿಯೊಂದಿಗೇ ಇರುವವರಿಂದ ಸದಸ್ಯರನ್ನು ಕೂಡಿಸಲು ಪರಿಸ್ಥಿತಿಯು ಉಂಟಾಗಿದೆ.

ಇತರೆ ವಿಷಯಗಳನ್ನೊಳಗೊಂಡು, ಇವೆಲ್ಲಕ್ಕೂ ಪಾರ್ಟಿ ಘಟನೆಯಲ್ಲಿ ಕೆಲವು ಬದಲಾವಣೆಗಳು ಅಗತ್ಯವಾಗಿದೆ.

ಆದರೆ ಈ ಬದಲಾವಣೆಗಳು ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿಯನ್ನು ಕಟ್ಟುವ ಅವಶ್ಯಕತೆ ಮತ್ತು ಬೇಡಿಕೆಯಿಂದ ಮಾತ್ರ ಉದ್ಭವಿಸುವುದಿಲ್ಲ. ಹಿಂದೆ ಕೂಡ ಈ ಪ್ರಶ್ನೆಯು ಪಾರ್ಟಿಯಲ್ಲಿ ಚರ್ಚೆಯಾಗಿದೆ. ಸಾರ್ವತ್ರಿಕ ಚುನಾವಣೆಗಳ ನಂತರ ಪಾರ್ಟಿ ಸದಸ್ಯತ್ವವನ್ನು ದ್ವಿಗುಣಗೊಳಿಸಲು ಕರೆ ಇತ್ತಾಗ ಸದಸ್ಯತ್ವವು ಒಂದು ಲಕ್ಷದಿಂದ 2·25 ಲಕ್ಷಕ್ಕೆ ಹೆಚ್ಚಿತು.

ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿಯನ್ನು ಕಟ್ಟುವ ಜರೂರು ಅವಶ್ಯಕತೆಯು ಪಾರ್ಟಿ ಘಟನೆಯಲ್ಲಿ ಕೆಲವು ಬದಲಾವಣೆಗಳ ಅಗತ್ಯತೆಯೂ ಅನಿವಾರ್ಯವಾಗಿ ಬಂದಿದೆ. ಆದರೆ ಇತರೇ ನೂತನ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಉದಾಹರಣೆಗೆ, ಸಮಾಜವಾದೀ ಜಗತ್ತು ಅದ್ಭುತವಾಗಿ ಬಲಗೊಂಡಿರುವುದು, ಮತ್ತು ಬಂಡವಾಳಶಾಹಿ ಜಗತ್ತಿನಲ್ಲಿ ಸಮಾಜವಾದ, ಶಾಂತಿ ಮತ್ತು ವಸಾಹತುಶಾಹಿಯ ಅಂತ್ಯಕ್ಕಾಗಿ ದುಡಿಯುತ್ತಿರುವ ಶಕ್ತಿಗಳು ಪ್ರಬಲಗೊಂಡಿರುವುದು ಇವುಗಳ ಪರಿಣಾಮವಾಗಿ ಮತ್ತು ಭಾರತದಲ್ಲೆ ಪ್ರಜಾಪ್ರಭುತ್ವ ಶಕ್ತಿಗಳು ಬೆಳೆಯುತ್ತಿರುವ ಪ್ರಾಬಲ್ಯದ ಪರಿಣಾಮವಾಗಿ—ಪೂರ್ಣ ಪ್ರಜಾಪ್ರಭುತ್ವ ಮತ್ತು ಸಮಾಜವಾದವನ್ನು ಶಾಂತಿಯುತ ಮಾರ್ಗದ ಮೂಲಕ ಸಾಧಿಸಲು ಇರುವ ಅವಕಾಶವನ್ನು ಪಾರ್ಟಿಯು ಮಾನ್ಯ ಮಾಡಿರುವ ಪರಿಸ್ಥಿತಿಯು ಉಂಟಾಗಿದೆ.

ಈ ಬೆಳವಣಿಗೆಗಳನ್ನು ನಾವು ಗಣನೆಗೆ ತೆಗೆದುಕೊಂಡಿದ್ದೇವೆ ಮತ್ತು ವಿವಿಧ ಬಗೆಯ ಸಾಮೂಹಿಕ ಚಟುವಟಿಕೆಯನ್ನು ಕೈಗೊಳ್ಳಲು ಸಾಧ್ಯವಿರುವಂಥ ಮತ್ತು ಅವಶ್ಯಬಿದ್ದಾಗ ಜನಸಮೂಹಗಳಿಗೆ ಕ್ರಾಂತಿಕಾರೀ ಕಾರ್ಯದಲ್ಲಿ ನಾಯಕತ್ವವೀಯಲು ಸಾಮರ್ಥ್ಯವಿರುವಂಥ ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿಯನ್ನು ಕಟ್ಟುವುದರಲ್ಲಿ ಪಾರ್ಟಿಯು ಸ್ವತಂತ್ರವಾಗಿ ಮತ್ತು ನ್ಯಾಯಬದ್ಧವಾಗಿ ಕೆಲಸ ಮಾಡಿಕೊಂಡು ಹೋಗಲು ಇರುವ ಈ ಸಾಧ್ಯತೆಗಳನ್ನು ನಾವು ಮನಗಂಡಿದ್ದೇವೆ.

ಆದ್ದರಿಂದಾಗಿ, ನಾವು ಯಾವುದೇ ಬದಲಾವಣೆಗಳನ್ನು ಮಾಡಲಿ ಅದು ನಿರ್ದಿಷ್ಟವಾಗಿ ಮಾರ್ಕ್ಸ್ ಮತ್ತು ಲೆನಿನ್‌ರಿಂದ ನಿರೂಪಿಸಲ್ಪಟ್ಟಿರುವ ಕಮ್ಯೂನಿಸ್ಟ್ ಪಾರ್ಟಿ ಸಂಘಟನೆಯ ಮೂಲತತ್ವಗಳಿಗೆ ಅನುಗುಣವಾಗಿರಬೇಕಾಗಿದೆ.

ಅಧಿಕಾರಿಯವರು ಕಮ್ಯೂನಿಸ್ಟ್ ಪಾರ್ಟಿಯ ಮೂಲತತ್ವಗಳನ್ನು, ಇತರ ಬಂಡವಾಳಶಾಹಿ ಮತ್ತು ಸುಧಾರಣವಾದೀ ಪಕ್ಷಗಳಿಗೂ ಅದಕ್ಕೆ ಇರುವ ವ್ಯತ್ಯಾಸವನ್ನು ಕುರಿತು ವಿವರಣೆ ಇತ್ತರು.

ಸಿದ್ಧಾಂತಿಕ ತಿಳುವಳಿಕೆ ಹೆಚ್ಚಿಸುವುದು

ನಮ್ಮ ಆಧಾರವನ್ನು ಕಾರ್ಮಿಕರು ಮತ್ತು ವ್ಯವಸಾಯ ಕೂಲಿಗಾರರ ನಡುವೆ ವಿಸ್ತರಿಸುವುದೇ ಅಲ್ಲದೆ, ಅವರಿಗೆ ನಿರಂತರವಾಗಿ ಶಿಕ್ಷಣ ಕೊಡುವುದರ ಮೂಲಕ ಮತ್ತು ಅವರನ್ನು ನಾಯಕತ್ವಕ್ಕೆ ತರುವುದರ ಮೂಲಕ ಹಾಗೂ ಇಡೀ ಪಾರ್ಟಿಯನ್ನೇ ಕಾರ್ಮಿಕ ವರ್ಗದ ಭಾವನೆ ಮತ್ತು ಕಾರ್ಮಿಕ ವರ್ಗದ ಸಿದ್ಧಾಂತದಲ್ಲಿ ಉತ್ತಮಗೊಳಿಸುವುದರ ಮೂಲಕ ತನ್ನ ಕಾರ್ಮಿಕ ವರ್ಗದ ಸ್ವಭಾವವನ್ನು ಬಲಗೊಳಿಸಲು ಪಾರ್ಟಿಯು ಶ್ರಮಿಸಬೇಕು.

ಪಾರ್ಟಿಯ ಶಕ್ತಿಗೆ ಎರಡನೆಯ ಆಧಾರವೆಂದರೆ ಅದು ಅದರ ಸಿದ್ಧಾಂತ—ಸಮಾಜವಾದೀ ಕ್ರಾಂತಿಯ ಸಿದ್ಧಾಂತ ಮತ್ತು ಕಾರ್ಯಕ್ರಮವಾಗಿರುವ ಮಾರ್ಕ್ಸ್‌ವಾದ—ಲೆನಿನ್‌ವಾದ.

ಭಾರತದ ವಾಸ್ತವ ಪರಿಸ್ಥಿತಿ, ಭಾರತದ ಇತಿಹಾಸದ ಅನುಭವ, ಭಾರತ ಜನತೆಯ ಪರಂಪರೆ ಮತ್ತು ಭಾರತದ ರಾಷ್ಟ್ರೀಯ ಔಚಿತ್ಯಗಳೊಂದಿಗೆ ನಮ್ಮ ಪಾರ್ಟಿಯು ಮಾರ್ಕ್ಸ್‌ವಾದ—ಲೆನಿನ್‌ವಾದ ಸಿದ್ಧಾಂತವನ್ನು ಸಮನ್ವಯಗೊಳಿಸುವುದೆಂದು ಪ್ರಸ್ತಾವನೆಯಲ್ಲಿ ಸರಿಯಾಗಿಯೇ ಒತ್ತಿ ಹೇಳಲಾಗಿದೆ. ಹೀಗೆ ಮಾಡುವಾಗ ಅದು ಪುನರ್‌ಪರಿಶೀಲನವಾದ, ಜಡವಾದ ಮತ್ತು ಪಂಥವಾದವನ್ನು ತೊಡೆದುಹಾಕುತ್ತದೆ.

ಸಮಾಜವಾದವೇ ನಮ್ಮ ಗುರಿ ಎಂದು ಹೇಳಿಕೊಳ್ಳುವ ಇತರ ಬಂಡವಾಳಶಾಹಿ ಮತ್ತು ಸಮಾಜವಾದೀ ಪಕ್ಷಗಳಿಂದ ಕಮ್ಯೂನಿಸ್ಟ್ ಪಾರ್ಟಿಯೂ, ಹೊಸ ಮಾದರಿಯಾಗಿ ಬೇರೆಯಾಗಿರುವುದಕ್ಕೆ ಕಾರಣ ಅದು ಹೋರಾಡುವ ಪಕ್ಷ—ಸಾಮಾಜಿಕ ಕ್ರಾಂತಿಕಾರಕ ಪಕ್ಷವಾಗಿದೆ.

ಬಂಡವಾಳಶಾಹಿ ಸಮಾಜ ವ್ಯವಸ್ಥೆಯಿಂದ ಸಮಾಜವಾದೀ ಸಮಾಜ ವ್ಯವಸ್ಥೆಗೆ ಬದಲಾವಣೆಯನ್ನು ತರಲು, ಕಾರ್ಮಿಕ ವರ್ಗವು ರೈತ ವರ್ಗ ಮತ್ತು ದುಡಿಯುವ ಜನಸಮೂಹಗಳೊಂದಿಗೆ ಒಂದುಗೂಡಿ ತನ್ನ ಕೈಗೆ ಅಧಿಕಾರವನ್ನು ತೆಗೆದುಕೊಳ್ಳಬೇಕು ಮತ್ತು ಸಂಘಟಿತವಾದ ವರ್ಗಜಾಗೃತಿಯುಳ್ಳ ಜನಸಮೂಹ ಶಕ್ತಿಗಳ ಬೆಂಬಲ ಪಡೆದು ಸಮಾಜವಾದವನ್ನು ಕಟ್ಟಲು ಈ ಅಧಿಕಾರವನ್ನು ಉಪಯೋಗಿಸಬೇಕು, ಶೋಷಕ ವರ್ಗ ಮತ್ತು ಪ್ರತಿಗಾಮಿ ವರ್ಗಗಳ ಪ್ರತಿಭಟನೆಯನ್ನು ತೊಡೆದುಹಾಕಬೇಕು. ಅದು ಶೇಕಡ 98ರ ಪ್ರಜಾಪ್ರಭುತ್ವವಾಗಿರುತ್ತದೆ ಮತ್ತು ಒಂದು ಸರ್ವಾಧಿಕಾರತ್ವವಾಗಿರುತ್ತದೆ ಮತ್ತು ಅಲ್ಪಸಂಖ್ಯಾತರಾದ ಪ್ರತಿಗಾಮಿಗಳ ಪ್ರತಿಭಟನೆಯ ಮೇಲೆ ಮಾತ್ರ ಬಲಪ್ರಯೋಗ ಮಾಡುತ್ತದೆ.

ಶೇಕಡ 98ರ ಪ್ರಜಾಪ್ರಭುತ್ವವಾಗಿದ್ದು ಅದು ಸಿಧಾನವಾಗಿ ಮಾನವನಿಂದ ಮಾನವನ ಶೋಷಣೆಯನ್ನು ನಿರ್ಮೂಲಗೊಳಿಸುತ್ತದೆ, ಪ್ರಜಾಪ್ರಭುತ್ವ ಮತ್ತು ವ್ಯಕ್ತಿಸ್ವಾತಂತ್ರ್ಯವು ಸಂಪೂರ್ಣವಾಗಿ ಅರಳುವುದಕ್ಕೆ ತಕ್ಕ ಸ್ಥಿತಿಗತಿಗಳನ್ನುಂಟುಮಾಡುತ್ತದೆ.

ಈ ಉದ್ದೇಶವು ಪಾರ್ಟಿಯ ಸಂಘಟನಾ ವ್ಯವಸ್ಥೆಯಲ್ಲಿಯೂ ಪ್ರತಿಬಿಂಬಿತವಾಗಿದೆ ಮತ್ತು ಅದನ್ನು ಹೋರಾಡುವ ಪಕ್ಷವಾಗಿ ಮಾಡಿದೆ.

ನಂತರ ಡಾ|| ಅಧಿಕಾರಿಯವರು ಕಮ್ಯೂನಿಸ್ಟ್ ಪಾರ್ಟಿ ಸಂಘಟನೆಯ ಮೂಲ ತತ್ವಗಳು ಮತ್ತು ಬೆಳವಣಿಗೆಗಯ ನಿಯಮ—ಪ್ರಜಾಪ್ರಭುತ್ವ ಕೇಂದ್ರೀಕರಣ ತತ್ವವನ್ನು ಕುರಿತು ವಿವರಿಸಿದರು.

ಈ ತತ್ವವು ಪಾರ್ಟಿಯನ್ನು ಐಕ್ಯವಾದ ಶಿಸ್ತಿನಿಂದ ಕೂಡಿದ ಮತ್ತು ಸಕ್ರಿಯವಾದ ಸಂಘಟನೆಯನ್ನಾಗಿ ಮಾಡುತ್ತದೆ. ತನ್ನ ಸದಸ್ಯಸಮೂಹವು ಕಾರ್ಯಾಚರಣೆಯಲ್ಲಿ ತೊಡಗುವಂತೆ ಮಾಡುತ್ತದೆ. ಇದು ಪಾರ್ಟಿಯು ನಿರೂಪಿಸುವ ಧೋರಣೆಗಳನ್ನು ಪ್ರಯೋಗದಲ್ಲಿ ತರುವ ಮತ್ತು ಜನಸಮೂಹಗಳ ತೀರ್ಪನ್ನು ಪಡೆಯುವ, ಹಾಗೂ ಈ ಧೋರಣೆಗಳ ಬಗ್ಗೆ ಜನಸಮೂಹಗಳ ಅನುಭವವನ್ನು ಸಾಮೂಹಿಕವಾಗಿ ಕ್ರೋಢೀಕರಿಸಿ ತಿದ್ದುಪಡಿಗಳು ಅಗತ್ಯವಿದ್ದಲ್ಲಿ ತಂದು ಸರಿಯಾದ ಧೋರಣೆಯನ್ನು ಸಿದ್ಧಗೊಳಿಸುವ ಭರವಸೆಯನ್ನೀಯುತ್ತದೆ.

ಒಟ್ಟಿನಲ್ಲಿ, ಪ್ರಜಾಪ್ರಭುತ್ವ ಕೇಂದ್ರೀಕರಣ ತತ್ವವು ಪಾರ್ಟಿಯು ಜನತೆಯ ಚಳವಳಿಯನ್ನು ತೀವ್ರವಾದ ಮತ್ತು ಐಕ್ಯವಾದ ಈ ರೀತಿಯಲ್ಲಿ ನಡೆಸಿಕೊಂಡು ಹೋಗುವ ಸಾಮರ್ಥ್ಯದ ಭರವಸೆಯನ್ನೀವುದೇ ಅಲ್ಲದೆ, ಕಾರ್ಯಾಚರಣೆಯಿಂದ ಮತ್ತು ಜನಸಮೂಹಗಳ ಅನುಭವದಿಂದ ನಿರಂತರವಾಗಿ ಪಾಠ ಕಲಿಯುತ್ತದೆಂಬುದನ್ನೂ. ಮತ್ತು ಹೆಚ್ಚು ಹೆಚ್ಚು ಸರಿಯಾದ ಧೋರಣೆಗಳನ್ನು ನಿರೂಪಿಸುವ ಸಾಮರ್ಥ್ಯವಿದೆಯೆಂಬುದನ್ನು, ಮತ್ತು ಪೂರ್ಣ ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕಾಗಿ ಹೋರಾಡುತ್ತಿರುವ ಜನಸಮೂಹಗಳ ನಂಬಿಕೆಗೆ ಅರ್ಹತೆಯುಳ್ಳ ನಾಯಕನಾಗುವ ಸಾಮರ್ಥ್ಯವಿದೆ ಎಂಬುದನ್ನು ಭರವಸೆ ಕೊಡುತ್ತದೆ.

ಡಾ|| ಅಧಿಕಾರಿಯವರು ಒತ್ತಿ ಹೇಳಿದ ಇನ್ನೊಂದು ಮುಖ್ಯ ಅಂಶವೆಂದರೆ ಅದು ಪಾರ್ಟಿ ಸಂಘಟನೆಯ ಮೂಲಾಧಾರವು ಶ್ರಮಜೀವಿ ಅಂತರರಾಷ್ಟ್ರೀಯತೆಯಾಗಿದೆ ಎಂಬುದು. ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯ ದಬ್ಬಾಳಿಕೆಯಿಂದ ಬಿಡುಗಡೆ

(೯ನೇ ಪುಟ ನೋಡಿ)

ಅಣುಶಸ್ತ್ರಾಸ್ತ್ರಗಳ ಪ್ರಯೋಗ ತಡೆಗೆ ಒತ್ತಾಯ

(೩ನೇ ಪುಟದಿಂದ)

ಅಣು ಶಸ್ತ್ರಾಸ್ತ್ರಗಳ ಪ್ರಯೋಗವನ್ನು ನಿಲ್ಲಿಸಬೇಕೆಂದು ಚಳವಳಿಯು ಬ್ರಿಟನ್ ಮತ್ತು ಅಮೇರಿಕಗಳಲ್ಲಿ ಪ್ರಬಲವಾಗಿ ನಡೆಯುತ್ತಿದೆ. ಕಳೆದ ವಾರ ಬ್ರಿಟನ್‌ನಲ್ಲಿ ಬೃಹತ್ ಪ್ರದರ್ಶನ ನಡೆದುದಲ್ಲದೆ ಮತ್ತೆ ಏಪ್ರಿಲ್ 13ರಂದು ಭಾರೀ ಪ್ರದರ್ಶನ ನಡೆದಿದೆ. ಅಮೇರಿಕದಲ್ಲಿ ಕಳೆದ ವಾರ ವಿಶ್ವ ಸಂಸ್ಥೆಯ ಕೇಂದ್ರ ಕಛೇರಿಯ ಎದುರು "ಅಣು ಶಸ್ತ್ರಗಳ ಪ್ರಯೋಗ ನಿಲ್ಲಲಿ" ಎಂದು ಪ್ರದರ್ಶನ ನಡೆದಿದೆ

ನತೆಯ ತೀವ್ರ ಪ್ರತಿಭಟನೆ ಇದ್ದಾಗ್ಯೂ ಸಹ ಅಮೇರಿಕ, ಬ್ರಿಟನ್ ಸರಕಾರಗಳು ಮುಂದಿನ ತಿಂಗಳಲ್ಲಿ ತಮ್ಮ ಪ್ರಯೋಗಗಳನ್ನು ನಡೆಸುವ ಸಿದ್ಧತೆಯು ಕೈಬಿಡುವುದಿಲ್ಲವೆಂದು ಘೋಷಿಸಿವೆ.

ಅಮೇರಿಕವು ಏಕಪಕ್ಷೀಯವಾಗಿ ಪ್ರಯೋಗಗಳನ್ನು ನಿಲ್ಲಿಸಲು ನಿರ್ಧರಿಸುವುದೆಂಬ ವದಂತಿ ಅಧ್ಯಕ್ಷ ಐಸನ್ ಹೋವರರ ಹೇಳಿಕೆಯಿಂದ ಹಬ್ಬಿದೆ. ಆದರೆ ಅಮೇರಿಕವು ಪ್ರಸ್ತುತ ಪ್ರಯೋಗಗಳನ್ನು ನಡೆಸಿದ ನಂತರದಲ್ಲಿ ಈ ಬಗ್ಗೆ ತೀರ್ಮಾನ ಕೈಗೊಳ್ಳುವುದೆಂದು ತಿಳಿದುಬಂದಿದೆ.



ವಿಶ್ವಸಂಸ್ಥೆಯ ಕೇಂದ್ರದ ಮುಂಭಾಗದಲ್ಲಿ ಅಣುಶಸ್ತ್ರಗಳ ಪ್ರಯೋಗದ ವಿರುದ್ಧ ಅಮೇರಿಕದಲ್ಲಿ ನಡೆದ ಪ್ರತಿಭಟನಾ ಪ್ರದರ್ಶನದ ದೃಶ್ಯ

ಬ್ರಿಟನ್ನಿನಲ್ಲಿ ಲೇಬರ್ ಪಕ್ಷವು ಸೋವಿಯತ್ ಯೂನಿಯನ್ ಏಕಪಕ್ಷೀಯವಾಗಿ ಅಣು ಶಸ್ತ್ರಗಳ ಪ್ರಯೋಗವನ್ನು ನಿಲ್ಲಿಸಿರುವಂತೆ ಬ್ರಿಟನ್ ಅಮೇರಿಕಗಳು ನಿಲ್ಲಿಸಬೇಕೆಂದು ಚಳವಳಿ ನಡೆಸುತ್ತಿದೆ. ಲಂಡನ್ ನಗರದಲ್ಲಿ ಈ ವಾರ ನಡೆದ ಬೃಹತ್ ಸಭೆಯಲ್ಲಿ ಭಾಷಣ ಮಾಡಿದ ಲೇಬರ ಪಕ್ಷದ ನಾಯಕರುಗಳಾದ ಮಿ। ಗೇಟ್‌ಸ್ಕೆಲ್, ಅನ್ಯುರಿನ್ ಬೆಲಾನ್‌ರವರು ಬ್ರಿಟನ್, ಅಮೇರಿಕಗಳು ಕೂಡಲೇ ಈ ಬಗ್ಗೆ ಘೋಷಿಸಬೇಕೆಂದು ಒತ್ತಾಯಪಡಿಸಿದ್ದಾರೆ. ಜ

ವಿಶ್ವದಾದ್ಯಂತ ಶಾಂತಿಪ್ರಿಯ ದೇಶಗಳೆಲ್ಲವೂ ಸೋವಿಯತ್ ಯೂನಿಯನಿನ ಘೋಷಣೆಯನ್ನು ಸ್ವಾಗತಿಸುತ್ತ ಅಮೇರಿಕ ಬ್ರಿಟನ್‌ಗಳೂ ಸಹ ಈ ಕ್ರಮವನ್ನನುಸರಿಸಬೇಕೆಂದು ಒತ್ತಾಯಪಡಿಸಿವೆ. ಮಾಸ್ಕೋದಲ್ಲಿ ಮೇ ದಿನಕ್ಕಾಗಿ ಇತ್ತಿರುವ ಘೋಷಣೆಯಲ್ಲಿ ವಿಶ್ವದ ಜನಕೋಟಿಯು ಅಣು ಶಸ್ತ್ರಗಳ ನಿಷೇಧಕ್ಕೆ ಪ್ರಬಲವಾದ ಚಳವಳಿ ನಡೆಸಬೇಕೆಂದು ಕಮ್ಯೂನಿಸ್ಟ್ ಪಾರ್ಟಿಯು ಕರೆಯಿತ್ತಿದೆ.

ಪೆರಿಯಾಪಟ್ಣ ಉಪಚುನಾವಣೆ ಫಲಿತಾಂಶ

ತಾ. 13—4—58ರಂದು ಪೆರಿಯಾಪಟ್ಟಣದಲ್ಲಿ ಉಪಚುನಾವಣೆ ನಡೆದು ಕಾಂಗ್ರೆಸ್ಸು 9,850 ಮತಗಳನ್ನು ಪಡೆದು ಜಯಗಳಿಸಿದೆ. ಕಳೆದ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ಸು ಗಳಿಸಿದ್ದ ಮತಗಳಲ್ಲಿ ಕೇವಲ ಅರ್ಧದಷ್ಟು ಮಾತ್ರ ಈ ಬಾರಿ ಗಳಿಸಿದೆ. ಇದರಿಂದ ಕಾಂಗ್ರೆಸ್ ಜನಗಳಲ್ಲಿ ಎಷ್ಟರ ಮಟ್ಟಿಗೆ ವಿಶ್ವಾಸವನ್ನು ಕಳೆದುಕೊಂಡಿದೆ ಎಂಬುದು ಗೊತ್ತಾಗುತ್ತದೆ. ಈ ಚುನಾವಣೆಗೆ ಮುಖ್ಯ ಮಂತ್ರಿಗಳು, ಕಾಂಗ್ರೆಸ್ ಅಧ್ಯಕ್ಷರು ಆದಿಯಾಗಿ ಪ್ರಚಾರ ನಡೆಸಿದ್ದಾರೆ. ಸ್ಥಳವಂದಿಗರಾದ ಶ್ರೀ ಚೆನ್ನಬಸಪ್ಪನವರು ಈ ಚುನಾವಣೆಗಾಗಿ ಬೇಕಾದ್ದನ್ನೆಲ್ಲಾ ಪ್ರಯತ್ನಪಟ್ಟಿರುತ್ತಾರೆ. ಕಾಂಗ್ರೆಸ್ಸಿನ ವಿರುದ್ಧ ಪ್ರತಿ ಸ್ಪರ್ಧಿಗಳು ಬಹಳವಾದ್ದರಿಂದ ಕಾಂಗ್ರೆಸು ಜಯಗಳಿಸಲು ಅನುಕೂಲವಾಯಿತೆಂಬದನ್ನು ಚುನಾವಣಾ ಕ್ಷೇತ್ರದ ಜನರು ಚೆನ್ನಾಗಿ ಅರಿತವರಾಗಿದ್ದಾರೆ.

ಸ್ವತಂತ್ರ ಉಮೇದುವಾರರಾಗಿ ನಿಂತಿದ್ದ ಇಬ್ಬರೂ ಜಾತೀಯವಾದವನ್ನು ಹೂಡಿ ಕಾಂಗ್ರೆಸು ಜಯಗಳಿಸುವಂತೆ ಮಾಡಿದ್ದಾರೆ. ಶ್ರೀ ಟಿ. ವೆಂಕಟರಾಮ್‌ರವರು ಕೊಡಗಿನವರ ಮೇಲೆ ಅಪಪ್ರಚಾರ ಮಾಡಿ ಸ್ಥಳೀಯ ಮತ್ತು ಜಾತೀಯ ವಾದವನ್ನು ಕೊನೆಯ ಗಳಿಗೆಯಲ್ಲಿ ಹೂಡಿ 6,144 ಮತಗಳನ್ನು ಗಳಿಸಿದ್ದಾರೆ. ಹಿಂದೆ ಇವರು ಕೊಡಗಿನ ಭಾಗದಲ್ಲಿ ಸುಮಾರು 5000 ಮತಗಳನ್ನು ಗಳಿಸಿದ್ದರು. ಈ ಬಾರಿ ಪಾರ್ಟಿಯು ಸ್ಪರ್ಧಿಸಿದ್ದರಿಂದ ಎಲ್ಲಾ ಕಡೆಗಳಲ್ಲೂ ಪಾರ್ಟಿಯ ಪ್ರಚಾರವಾಗಿದೆ. ಕಮ್ಯೂನಿಸ್ಟ್ ಉಮೇದುವಾರರಾದ ಬಿ. ಎನ್. ಕುಟ್ಟಪ್ಪನವರು 4,093 ಮತಗಳಿಸಿದ್ದಾರೆ. ನಿಷ್ಠಾವಂತ ಜನರು ನಮ್ಮ ಜೊತೆಯಲ್ಲಿ ನಿಂತು ಚುನಾವಣೆಯಲ್ಲಿ ಕೆಲಸ ಮಾಡಿದ ಜನರು ರೈತಸಂಘವನ್ನು ಕಟ್ಟಬೇಕೆಂದೂ ಕಮ್ಯೂನಿಸ್ಟ್ ಪಾರ್ಟಿಯನ್ನು ಬೆಳಸಬೇಕೆಂದೂ ಮುಂದೆ ಬಂದಿದ್ದಾರೆ. ಚುನಾವಣೆಯ ಫಲಿತಾಂಶದಲ್ಲಿ ಕಮ್ಯೂನಿಸ್ಟ್ ಪಾರ್ಟಿಗೆ ಸೋಲು ಕಂಡಿದ್ದರೂ ಪೆರಿಯಾಪಟ್ಣದ ಕ್ಷೇತ್ರದ ಜನರ ಸಮಸ್ಯೆಗಳನ್ನು ಬಗೆಹರಿಸಲು ರೈತ ಸಮುದಾಯವನ್ನು ಬೆಳಸಿ ಪಾರ್ಟಿಯು ಮುಂದಾಳತ್ವ ವಹಿಸುವ ಭವಿಷ್ಯವನ್ನು ನಾವು ಕಾಣುತ್ತೇವೆ.

ಅಮೇರಿಕವು ನಡೆಸಲಿರುವ ಪ್ರಯೋಗದ ವಿರುದ್ಧ ಪ್ರತಿಭಟಿಸಿ, ಸತ್ಯಾಗ್ರಹ ನಡೆಸಲು ತಂಡವೊಂದು ತೀರ್ಮಾನಿಸಿದೆ. ವಿದೇಶಾಂಗ ಸಚಿವ ಡಲ್ಲೆಸ್ ಈ ತಂಡವನ್ನು ಬಂಧಿಸುವುದಾಗಿ ಈಗಾಗಲೇ ಹೇಳಿದ್ದಾರೆ.

ಪ್ರಬಲವಾದ ಚಳವಳಿ ಮತ್ತು ವಿಶ್ವದ ಜನತೆಯ ಒತ್ತಾಯ ಪ್ರತಿಭಟನೆಗಳಿಂದ ಮಾತ್ರ ಅಮೇರಿಕ ಬ್ರಿಟನ್‌ಗಳು ಅಣು ಶಸ್ತ್ರಗಳ ಪ್ರಯೋಗವನ್ನು ನಿಲ್ಲಿಸುವಂತೆ ಮಾಡಲು ಸಾಧ್ಯ.

ಬೆಂಗಳೂರು—

ರೈತ ಸಂಘದ ಆರಂಭ

ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಹೋಬಳಿ ಸಿಂಗಾಪುರ ಗ್ರಾಮದ ರೈತ ಸಂಘವು ಸಿ. ಮುನಿಶಾಮಪ್ಪನವರ ಅಧ್ಯಕ್ಷತೆಯಲ್ಲಿ ತಾ. 13—4—58ರಂದು ಆರಂಭವಾಯಿತು. ಬಿ. ಟಿ. ರಾಜಣ್ಣನವರು ರೈತ ಸಂಘದ ಅವಶ್ಯಕತೆಯನ್ನು ವಿವರಿಸಿದರು ಮತ್ತು ಕೇರಳ ಸರಕಾರ ರೈತರ ಬಗ್ಗೆ ಮಾಡಿರುವ ಸಾಹಸ ಕಾರ್ಯಗಳನ್ನು ವಿವರಿಸಿದರು. ನಂತರ ಗ್ರಾಮ ರೈತ ಸಂಘದ ಸಮಿತಿಯನ್ನು ರಚಿಸಲಾಯಿತು.

ಸುದ್ದಿ ಸಂಗ್ರಹ

ಬಿಜಾಪುರದಲ್ಲಿ ಭಟ್ಟಸೆರೆ ಮಾರುವವರಿಗೆ ಧನ ಸಹಾಯ!

ಮಾರ್ಚ್ ತಿಂಗಳ ಮಧ್ಯದಲ್ಲಿ ಬೆಳಗಾವಿ ಸಮಾಜ ಕಲ್ಯಾಣ ಕೇಂದ್ರದಿಂದ ಶ್ರೀ ಶಿಂಧೆ ಎಂಬವರು ಬಿಜಾಪುರಕ್ಕೆ ಬಂದು, ಭಾಟ, ಹರಿಣ ಶಿಕಾರಿ, ಗೋಂಧಲಿಗರು, ಗಿಸಾಡಿ ಮೊದಲಾದ ಹಿಂದುಳಿದ ಜನರಿಗೆ ಭೆಟ್ಟಿಯಾಗಿ, ಸರಕಾರದವರು ಮಾರ್ಚ್ ತಿಂಗಳೊಳಗಾಗಿ ಹಿಂದುಳಿದ ವರ್ಗದವರಿಗೆ (ನೊಮಾಡಿಕ ಮತ್ತು ಸೆಮಿನೊಮಾಡಿಕ) ತಂತಮ್ಮ ವಂಶಜರಿಂದ ಮಾಡಿಕೊಂಡು ಬಂದಂಥಾ ಉದ್ಯೋಗಗಳನ್ನು ಮಾಡಿಕೊಂಡು ಉಪಜೀವನ ನಡೆಸುವವರಿಗೆ, ಸಹಾಯಧನವನ್ನು ಮತ್ತು ಉದ್ಯೋಗಕ್ಕೆ ಬೇಕಾದ ಸಾಮಾನುಗಳನ್ನು ಒದಗಿಸಿಕೊಡುವವರಿದ್ದಾರೆ. ಕಾರಣ ಎಲ್ಲರೂ ಅರ್ಜಿ ಮಾಡಿಕೊಳ್ಳಬೇಕೆಂದು ಹೇಳಿದರು. ಶ್ರೀ ಕಾಳೆ ಎಂಬವರು 0—8—0 ಆಣೆಗೆ ಒಂದು ಅರ್ಜಿಯ ಪ್ರತಿಯನ್ನು ಒದಗಿಸಿದರು. ಸರಕಾರದವರು ಪುಕ್ಕಟೆಯಾಗಿ ಅರ್ಜಿಯ ಪ್ರತಿಯನ್ನು ಒದಗಿಸಿ ಕೊಡಬೇಕಾಗಿತ್ತೋ ಏನೋ ತಿಳಿಯದು. ಸಾಧಾರಣ 130ಕ್ಕೆ ಮೇಲ್ಪಟ್ಟು ಅರ್ಜಿಗಳು ಬಂದಿದ್ದಾವಂತೆ. ಈ ಅರ್ಜಿಗಳ ಮೇಲೆ ಕಾಂಗ್ರೆಸ್ ಎಂ. ಎಲ್. ಎ.ಗಳಾದ ಶ್ರೀ ಕಬಾಡೆಯವರು ಶಿಫಾರಸು ಮಾಡಿದ್ದರು. ಶ್ರೀ ಶಿಂಧೆಯವರು ಈ ಅರ್ಜಿಗಳನ್ನು ಧಾರವಾರದಲ್ಲಿರುವ ಅಸಿಸ್ಟೆಂಟ್ ಡೈರಕ್ಟರರಿಗೂ ಅವರು ಬೆಂಗಳೂರಲ್ಲಿರುವ ಡೈರಕ್ಟರರಿಗೂ ಕಳುಹಿಸಿದ್ದಾರಂತೆ. ಸಮಾಜ ವಿಕಾಸ ಕೇಂದ್ರದ ಡೈರಕ್ಟರರಿಂದ ಕೆಲವರಿಗೆ ಪ್ರತಿ ರೂ. 50ರಂತೆ ಧನಸಹಾಯ ಮಾಡಬೇಕೆಂದು, ಬಿಜಾಪುರದ ಕಲೆಕ್ಟರರ ಕಡೆಗೆ ಯಾದಿ ಬಂದಿದೆ ಕೆಲವರಿಗೆ ಹೊಲಿಯುವ ಮೆಶಿನ ಕೊಡಿಸಬೇಕೆಂದು ಹುಕುಂ ಆಗಿದಂತೆ. ಕಲೆಕ್ಟರರ ಕಡೆಗೆ ಬಂದ ಯಾದಿಯನ್ನು ನೋಡುವಾಗ, ನಿಜವಾಗಿಯೂ ತಮ್ಮ ವಂಶಜರ ಉದ್ಯೋಗ ಮಾಡಿ ಉಪಜೀವನ ನಡೆಸುತ್ತಿರುವ ಗಿಸಾಡೆ, ಗೋಂಧಲಿ ಮೊದಲಾದವರಿಗೆ ಧನ ಸಹಾಯ ಸಿಗಲಿಲ್ಲ. ಆದರೆ ದಾರುಬಟ್ಟಿ ಉದ್ಯೋಗ ಮಾಡುವವರಿಗೆ ಸರಕಾರದವರು ಧನಸಹಾಯ ಮಾಡಿರುವರೆಂದು ಕಂಡು ಬರುತ್ತದೆ. ಯಾರ ಶಿಫಾಸಿರನ ಮೇಲೆ ಈ ಧನ ಸಹಾಯ ಕೊಡಲಾಯಿತೆಂದು ತಿಳಿಯಲಿಲ್ಲ. ಗಿಸಾಡೆ ಜನರು ಕುಂಬಾರಿಕೆ ಕೆಲಸ ಮಾಡುತ್ತಿದ್ದು, ತಿದಿ, ಕಬ್ಬಿಣ, ಸುತ್ತಿಗೆ ಮೊದಲಾದ ಸಾಮಾನುಗಳನ್ನು ಖರೀದಿ ಮಾಡಲು ಹಣದ ಸಹಾಯ ಮಾಡುತ್ತಿದ್ದರೆ, ಈ ಸಮಾಜದ ಜನರಿಗೆ ತಮ್ಮ ಉದ್ಯೋಗ ನಡೆಸಿಕೊಂಡುಹೋಗಲು ಬಹಳ ಸಹಾಯಮಾಡಿದಂತಾಗುತ್ತಿತ್ತು. ಅದೇ ರೀತಿಯಲ್ಲಿ ಗೋಂಧಲಿಗನಿಗೆ ಹಣದ ಸಹಾಯ ಸಿಕ್ಕಿದೆ.

ಸಮಾಜ ಕಲ್ಯಾಣ ಕೇಂದ್ರದವರಿಂದ ಅರ್ಜಿಗಳನ್ನು ಸ್ವೀಕಾರಮಾಡಿ, ಮಾಮಲೇದಾರ (ತಹಶಿಲದಾರ) ಕಛೇರಿಯಿಂದ ಹಣದ ವಿತರಣೆ ಮಾಡುತ್ತಿರುವಾಗ, ಅದರಲ್ಲೂ ಸಾಕಷ್ಟು ಹಣ ಸರಕಾರದ ಹತ್ತರ ಇಲ್ಲದಿರುವಾಗ, ಸಮಾಜ ಕಲ್ಯಾಣ ಕೇಂದ್ರದ ಡೈರಕ್ಟರರೇ ಅರ್ಜಿಗಳನ್ನು ಮಂಜೂರು ಮಾಡುವ ಜವಾಬ್ದಾರಿ ವಹಿಸದೆ, ಮಾಮಲೇದಾರರಿಗೆ (ತಹಶೀಲದಾರ) ಆ ಜವಾಬ್ದಾರಿ ಕೊಟ್ಟಿದ್ದರೆ, ಯೋಗ್ಯ ಮನುಷ್ಯನಿಗೆ ಸಹಾಯ ಸಿಗುತ್ತಿತ್ತು. ಈ ಸಲ ಧನಸಹಾಯ ಎಂಥ ವ್ಯಕ್ತಿಗಳಿಗೆ ಕೊಡಲಾಗಿದೆಂಬುದನ್ನು ಸರಕಾರದವರು ಕೂಡಲೇ ವಿಚಾರ ಮಾಡಬೇಕು ಮತ್ತು ಯೋಗ್ಯ ಮನುಷ್ಯರಿಗೆ ಧನದ ಸಹಾಯ ಸಿಗುವಂತೆ ಮಾಡಬೇಕು.

ದೊಡ್ಡಬಳ್ಳಾಪುರ—

ಆರೂಡಿಯಲ್ಲಿ ರೈತ ಸಂಘದ ಸಭೆ

ದೊಡ್ಡಬಳ್ಳಾಪುರದ ತಾಲ್ಲೂಕು ಸಾಸಲು ಹೋಬಳಿ ಆರೂಡಿ ಗ್ರಾಮದಲ್ಲಿ ತಾ. 11—4—58ನೇ ಶುಕ್ರವಾರ ಸಂಜೆ 8 ಘಂಟೆಗೆ ಊರಿನ ರೈತ ಸಂಘದವರು ಬಹಿರಂಗ ಸಭೆಯನ್ನು ಏರ್ಪಡಿಸಿದ್ದರು. ಸಭೆಯಲ್ಲಿ ಸುಮಾರು ಇನ್ನೂರು ಜನ ರೈತರು ನೆರೆದಿದ್ದರು. ತಾಲ್ಲೂಕು ರೈತ ಸಂಘದ ಅಧ್ಯಕ್ಷರಾದ ಶ್ರೀ ಎಚ್. ಮುಗುವಾಳಪ್ಪನವರು, ಜೋಡಿ ಗ್ರಾಮ ಹಾಗೂ ಜಮೀನ್ದಾರೀ ಪದ್ಧತಿಯು ಪರಕೀಯರು ನಮ್ಮವರಿಂದಲೇ ಸಮಾಜವನ್ನ ತುಳಿದಿಟ್ಟುಕೊಳ್ಳಲು ಹೂಡಿದ ರಾಜಕೀಯ ಕುತಂತ್ರವೆಂದೂ, ಸ್ವಾತಂತ್ರ್ಯ ಬಂದ ತರುಣದಲ್ಲೆ ಇವು ನಿವಾರಣೆಯಾಗಿ ಬಡವರ ಶೋಷಣೆ ತಪ್ಪಬೇಕಾಗಿತ್ತು. ಆದರೆ ಆಡಳಿತ ನಡೆಸುತ್ತಿರುವ ಸಂಸ್ಥೆಯೊಳಕ್ಕೆ ಸಮಾಜ ಶೋಷಕರು ನುಗ್ಗಿ ನಮ್ಮ ನಾಯಕರು ಅವರ ಕೈಗೊಂಬೆಗಳಾಗುತ್ತಿದ್ದಾರೆಂದೂ, ಅರಿಯದ ರೈತರ ಹೆಸರಿನಲ್ಲಿ ಕೆಲವು ಕಾಂಗ್ರೆಸ್ ಖದೀಮರು ನಡೆಸುತ್ತಿರುವ ಅತ್ಯಾಚಾರ ಹೇಳತೀರದು, ಇಂಥವರಿಗೆಲ್ಲಾ ಸರ್ಕಾರ ನೆರವು ಕೊಟ್ಟು ಸರ್ಕಾರದಲ್ಲಿ ಜನತೆಗೆ ಇದ್ದ ಭರವಸೆ ಮಾಯವಾಗುತ್ತಿದೆ.

ಮೊನ್ನೆ ತಾನೆ ಪತ್ರಿಕೆಯೊಂದರಲ್ಲಿ ನಮ್ಮ ತಾಲ್ಲೂಕಿನಲ್ಲೆ ತೂಬಗೆರೆ ಹೋಬಳಿ ಗಂಟಿಗಾನಹಳ್ಳಿ ಸೊಸೈಟಿಯ ಅಧ್ಯಕ್ಷ ಶ್ರೀ ಮಾರಹಳ್ಳಿ ಹೊನ್ನೂರಪ್ಪ ಎನ್ನುವವರು, ರಾತ್ರಿ ಕಾಂಗ್ರೆಸ್ ಟೋಪಿ ಹಾಕಿಕೊಂಡು ಬೆಳಿಗ್ಗೆ 100 ಟನ್ ಮೆಣಸಿನ ಕಾಯಿಗೆ ಎಕ್ಸ್‌ಪೋರ್ಟ್ ಪರ್ಮಿಟ್ ಪಡೆದು ಕಾಲಿ ಪರ್ಮಿಟ್ಟನ್ನೆ 50,000 (ಐವತ್ತು ಸಹಸ್ರ) ರೂಪಾಯಿಗಳಿಗೆ ಮಾರಿಕೊಂಡು ರೈತರಿಗೂ ಸಂಘಕ್ಕೂ ಮೋಸ ಪಡಿಸಿದ ವಿಚಾರ ವರದಿಯಾಗಿತ್ತು. ಈ ಬಗ್ಗೆ ವಿಚಾರಣೆ ನಡೆಸಬೇಕೆಂದು ಅದೇ ಸೊಸೈಟಿಯ ಬಹುಮಂದಿ ಸದಸ್ಯರೂ, ಕಾರ್ಯದರ್ಶಿಯವರೂ, ರೈತರೂ ಸಹ ಒಂದು ವರ್ಷದಿಂದ ಬೊಬ್ಬೆ ಹಾಕುತ್ತಿದ್ದಾರೆ, ಕೇಳುವರೇ ದಿಕ್ಕಿಲ್ಲ. ಇದಕ್ಕೆ ಉತ್ತರವಾಗಿ ಮತ್ತೆ ಮತ್ತೆ ಪರ್ಮಿಟ್ಟುಗಳು, ಮೊನ್ನೆ ತಾನೆ ಸಾವಿರ ಇನ್ನೂರು ಟನ್ ಈರುಳ್ಳಿಗೆ ಪರ್ಮಿಟ್ಟಂತೆ. ಸ್ವಾತಂತ್ರ್ಯವನ್ನು ಕಾಪಾಡುವುದು, ರಾಷ್ಟ್ರವನ್ನು ಕಟ್ಟುವುದು ಯಾವುವೋ ಕೆಲವು ರಾಜಕೀಯ ಪಕ್ಷಗಳಿಗೆ ಸಂಬಂಧಪಟ್ಟ ವಿಚಾರವೆಂದು ಕೈಕಟ್ಟಿ ಕೂಡಬಾರದು, ಸಮಾಜದಲ್ಲಿ ಹೊಸ ಚೈತನ್ಯ ಬರಬೇಕು, ರೈತರಲ್ಲಿ ಸಂಘಟನೆ ಏರ್ಪಡಾಗಬೇಕು, ಆದಷ್ಟು ರೈತ ಸಂಘಕ್ಕೆ ಹೆಚ್ಚು ಸದಸ್ಯರನ್ನು ಕೂಡಿಸಬೇಕೆಂದು ಕೋರಿ ಭಾಷಣ ಮಾಡಿದರು. ಶ್ರೀ ಚಿಕ್ಕಗಂಗಣ್ಣನವರಿಂದ ವಂದನಾರ್ಪಣೆಯಾದ ನಂತರ ಸಭೆ ಮುಕ್ತಾಯವಾಯಿತು.

ಶನಿವಾರ ಬೆಳಗ್ಗೆ 9 ಘಂಟೆಗೆ ಸಂಘದ ಮುಖ್ಯ ಕಾರ್ಯಕರ್ತರು ಸೇರಿ ಅಧ್ಯಕ್ಷರಿಗೆ ಗ್ರಾಮದ ಪರಿಸ್ಥಿತಿ ಬಗ್ಗೆ ವಿವರವಾದ ವರದಿಯನ್ನು ಕೊಟ್ಟರು. ಇಲ್ಲಿನ ಜೋಡೀದಾರರೊಬ್ಬರು ಸುಮಾರು ಒಂದು ತಿಂಗಳಿಂದ ಹಸಿ ಮರಗಳನ್ನು ಕತ್ತರಿಸಿ ಲಾರಿಗಳಲ್ಲಿ ಸಾಗಿಸುತ್ತಿರುವುದಾಗಿಯೂ, ಈಗಾಗಲೇ 300 ಟನ್ ಸೌದೆ ಸಾಗಿಸಿರುವುದಾಗಿಯೂ ತಿಳಿಸಿ ಇದನ್ನು ತಡೆಗಟ್ಟಲು ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಮನವಿ ಮಾಡಿಕೊಂಡರು.

ಭಗವದ್ಗೀತೆ ರಶಿಯನ್ ಭಾಷೆಯಲ್ಲಿ

ಭಾರತೀಯ ಜನತೆಯ ಅಮರ ಕಾವ್ಯವಾದ 'ಭಗವದ್ಗೀತೆ'ಯ ಸಂಪೂರ್ಣ ಭಾಷಾಂತರವನ್ನು ರಶಿಯನ್ ಭಾಷೆಯಲ್ಲಿ ೧೯೫೬ರಲ್ಲಿ ಸೋವಿಯತ್ ನಾಡಿನ ವಿಜ್ಞಾನ ಸಂಸ್ಥೆಯು ಹೊರತಂದಿದೆ. ಅಕೆಡೆಮಿಷಿಯನ್ ಬಿ. ಸ್ಮಿರ್ನೋವ್‌ರವರು ಸಂಸ್ಕೃತ ಮೂಲದಿಂದಲೇ ನೇರವಾಗಿ ಭಾಷಾಂತರವನ್ನು ಮಾಡಿದ್ದಾರೆ. ಇದು ಅವರ ಇಪ್ಪತ್ತು ವರ್ಷಗಳ ಪ್ರಯತ್ನದ ಫಲ. ಈ ಕೃತಿಯನ್ನು ತುರ್ಕ್‌ಮೆನ್ ವಿಜ್ಞಾನ ಶಾಸ್ತ್ರ ಪರಿಷತ್ತು ಅಷ್ಖಾಬಾದಿನಲ್ಲಿ ಪ್ರಕಟಿಸಿದೆ.

"ಭಗವದ್ಗೀತೆ" ಯೊಂದಿಗೆ ಸೋವಿಯೆತ್ ಓದುಗನು ಪಡೆಯುವ ಪರಿಚಯವು ನಿಸ್ಸಂದೇಹನಾಗಿಯೂ ಆತನಿಗೆ,-ಭಾರತ ದೇಶದ ಜನತೆಯು ಮಾನವಕೋಟಿಯ ಸಂಸ್ಕೃತಿಗೆ ನೀಡಿರುವ ಕೊಡುಗೆಯ ಕುರಿತು ಹೆಚ್ಚಿನ ತಿಳಿವಳಿಕೆಯನ್ನು, ಯೋಗ್ಯ ಮೌಲ್ಯ ನಿರ್ಣಯವನ್ನು ಮಾಡುವ ಅವಕಾಶವನ್ನೂ, ನೀಡುತ್ತದೆ. ಭಾರತ ದೇಶದ ಮತ್ತು ಸೋವಿಯೆತ್ ಒಕ್ಕೂಟದ ಜನತೆಗಳ ಅಧ್ಯಾತ್ಮಿಕ ವಿಕಾಸದಲ್ಲಿ ಎಷ್ಟೊಂದು ಸಮಾನತೆಯುಂಟೆಂಬುದನ್ನು ಮನಗಾಣಲು ಈ ಮಹತ್ಕೃತಿಯ ಅಧ್ಯಯನವು ಓದುಗನಿಗೆ ಸಾಮರ್ಥ್ಯವನ್ನು ನೀಡುತ್ತದೆ. ಆದುದರಿಂದಲೇ, ಈ ರಶಿಯನ್ ಭಾಷಾನುವಾದದ ಸಾರಾಂಶವೂ ಮತ್ತು ಮಹತ್ವವೂ, ಈ ಕೃತಿಯ ಅನುವಾದಕರ್ತರು ಅದನ್ನು "ಭಾರತ ದೇಶದ ಮತ್ತು ಸೋವಿಯೆತ್ ಒಕ್ಕೂಟದ ಜನತೆಗಳ ಸೋದರ ಸಂಬಂಧಕ್ಕೆ" ಸಮರ್ಪಿಸುವಂತೆ ಅವರಿಗೆ ಪ್ರೇರಣೆಯನ್ನು ನೀಡಿತು.

ಭಾಷಾಂತರಕಾರರ ಸೂಕ್ಷ್ಮ ಪರಿಚಯ

ಅಕೆಡೆಮಿಷಿಯನ್ ಬಿ. ಸ್ಮಿರ್ನೋವ್‌ರವರು ಬಹು ದೀರ್ಘಪಥವನ್ನು ಕ್ರಮಿಸಿದ್ದಾರೆ. ಅವರ ಮೂಲವೃತ್ತಿಯು ವೈದ್ಯಕೀಯದ್ದಾಗಿತ್ತು. ಭಾರತ ವಿದ್ಯಾಧ್ಯಯನವಾಗಿರಲಿಲ್ಲ, ಆದರೂಕೂಡ, ಅಂತರ್ಗತಸಾರ ಸಂಪತ್ತಿನಿಂದ ತುಂಬಿದ್ದ ಅವರ ದೀರ್ಘ ಜೀವನವು ಅವರಿಗೆ "ಭಗವದ್ಗೀತೆ" ಯ ಪ್ರಗಾಢ ತಿಳಿವಳಿಕೆಯನ್ನು ಮಾಡಿಕೊಟ್ಟಿತೆಂಬುದು ಹೆಚ್ಚು ಸಂಭವನೀಯವಾದ ಮಾತು. ಆದುದರಿಂದಲೇ ಅವರು ಭಗವದ್ಗೀತೆಯ ನಿಜವಾದ ಅಭಿಪ್ರಾಯವನ್ನು ತಿಳಿಸಲು ಸಮರ್ಥರಾದರು. ಈ ಕೃತಿಗೆ ಅವರು ಬರೆದಿರುವ ವ್ಯಾಪಕವಾದ ಉಪೋದ್ಘಾತವೂ ಅದರೊಂದಿಗೆ ನೀಡಲಾಗಿರುವ ವಿವರಣಾತ್ಮಕವಾದ ಭಾಷ್ಯವೂ, ಈ ಭಾಷಾಂತರ ಕರ್ತರ ಪ್ರಾಚೀನ ಸಂಸ್ಕೃತಿಯ ಮತ್ತು ಭಾಷಾ ಶಾಸ್ತ್ರದ ಪೌಢಿಮೆಯ ಬಗ್ಗೆ ಪ್ರತ್ಯಕ್ಷ ಪ್ರಮಾಣವನ್ನು ನೀಡುತ್ತದೆ ಮಾತ್ರವಷ್ಟೇ ಅಲ್ಲ; ಅವರು ಆದರ ಮೂಲ ಕೃತಿರತ್ನದ ನಿಜವಾದ ಅರ್ಥವನ್ನು, ಒಳಹೊಕ್ಕು ಹೇಗೆ ಚೆನ್ನಾಗಿ ಗ್ರಹಿಸಿಕೊಂಡಿದ್ದಾರೆಂಬುದನ್ನೂ ಸಹ ಅದು ತೋರಿಸುತ್ತದೆ.

— "ತಾಸ್"

ಓದುಗರ ಓಲೆ

ಹಿಂದಿ ಉಪಾಧ್ಯಾಯರಿಲ್ಲದೆ ವಿದ್ಯಾರ್ಥಿಗಳ ಪಾಪಾಸು

ಕಳೆದ ಒಂದು ವರ್ಷದಿಂದ ಈ ಶಾಲೆಯಲ್ಲಿ ಹಿಂದಿ ಪಂಡಿತರಿಲ್ಲದೆ ಹುಡುಗರಿಗೆ ಹಿಂದಿ ಪಾಠಗಳೇ ನಡೆದಿರುವುದಿಲ್ಲ. ಸ್ಥಳದ ಯುವಕರು ಈ ಬಗ್ಗೆ ಮಾನ್ಯವಿದ್ಯಾ ಸಚಿವರ, ಹಾಗೂ ವಿದ್ಯಾ ಇಲಾಖೆಯ ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸಿದಾಗ್ಯೂ ಶ್ರೀ ಗೋಪಾಲ ಭಟ್ಟರಿಗೆ ಊರಿನ ಹೊಸ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಂ. ಟಿ. ಶ್ರೀಕಂಠಯ್ಯನವರೂ, ಮತ್ತು ಹೈಸ್ಕೂಲು ಹೆಡ್ಮಾಸ್ಟರ್ ಶ್ರೀ ಕೃಷ್ಣಮೂರ್ತಿಯವರು ಇಬ್ಬರೂ ಸೇರಿ ಪಿತೂರಿ ನಡೆಸಿ ತೊಂ

(೯ನೇ ಪುಟ ನೋಡಿ)

ಸರಕಾರ ಮತ್ತು ಜನತೆ—ಒಂದು ಹೊಸ ದೃಷ್ಟಿ

(೪ನೇ ಪುಟದಿಂದ)

ಎರಡನೆಯದು, ಆಡಳಿತೆಯ ವಿವಿಧ ಕ್ಷೇತ್ರಗಳಲ್ಲಿ ಜನತೆಯನ್ನು ಭಾಗಿಯಾಗಿ ಮಾಡುವ ಉದ್ದೇಶ್ಯದಿಂದ ಜನಪ್ರಿಯ ಖಾಸಗೀ ಸಲಹಾ ಸಮಿತಿಗಳು ಇವೆ.

ವಿರೋಧ ಪಕ್ಷಗಳ ನಾಯಕರು ಅಂಥ ಸಲಹಾ ಸಮಿತಿಗಳಿಗೆ ವಿರೋಧವಿದ್ದಾರೆ. ಅಧಿಕಾರಶಾಹಿಗಳ ಚಟುವಟಿಕೆಯ ಮೇಲೆ ಜನಪ್ರಿಯ ಹತೋಟಿ ಇರುವುದು ಅವರಿಗೆ ಬೇಕಿಲ್ಲ. ಆದ್ದರಿಂದಾಗಿ ಅವರು, ಈ ಸಮಿತಿಗಳನ್ನು ಕಮ್ಯೂನಿಸ್ಟರಿಗೆ ಉದ್ಯೋಗ ಕೊಡುವುದಕ್ಕಾಗಿ ಮಾಡಲಾಗಿದೆ ಮತ್ತು ಇದರಲ್ಲಿ ಕಮ್ಯೂನಿಸ್ಟರೇ ತುಂಬಿದ್ದಾರೆ ಎಂದು ಅಪಪ್ರಚಾರ ಆರಂಭಿಸಿದರು. ಬಜೆಟ್ ಚರ್ಚೆಯಲ್ಲಿ ಶಾಸನ ಸಭೆಯಲ್ಲಿಯೇ ಈ ಆರೋಪವನ್ನು ಮಾಡಲಾಯಿತು.

ಈ ಆರೋಪಗಳನ್ನು ಮಾಡುವಾಗ್ಗೆ ಅವರಿಗೆ ವಾಸ್ತವಾಂಶಗಳಲ್ಲಿ ವಿಶ್ವಾಸವಿಲ್ಲ. 21 ಮಂದಿ ಸದಸ್ಯರಿರುವ ರಾಜ್ಯಯೋಜನಾ ಸಲಹಾ ಸಮಿತಿಯಲ್ಲಿ ಕಮ್ಯೂನಿಸ್ಟ್ ಸದಸ್ಯರಿರುವುದು ನಾಲ್ಕು ಮಂದಿ ಮಾತ್ರ. ಶಾಸನ ಸಭೆಯಲ್ಲಿ 64 ಕಮ್ಯೂನಿಸ್ಟ್ ಸದಸ್ಯರು, 43 ಕಾಂಗ್ರೆಸ್ ಸದಸ್ಯರು ಮತ್ತು ಪಿ ಎಸ್. ಪಿ. ಮತ್ತು ಲೀಗ್‌ನವರು ತಕ್ಕಂತೆ ಒಂದೊಂದು ಸಮಾನ ಸ್ಥಾನದ ಪ್ರಾತಿನಿಧ್ಯವನ್ನು ಯೋಜನಾ ಸಮಿತಿಯಲ್ಲಿ ಪಡೆದಿದ್ದಾರೆ.

ಜಿಲ್ಲಾ ಅಭಿವೃದ್ಧಿ ಕೌನ್ಸಿಲ್‌ಗಳಲ್ಲಿರು ಒಟ್ಟು ೨೦೮ ಖಾಸಗೀ ಸದಸ್ಯರಲ್ಲಿ ಕಮ್ಯೂನಿಸ್ಟರು 75ಕ್ಕಿಂತ ಹೆಚ್ಚಿಲ್ಲ, ಆದರೆ ಕಾಂಗ್ರೆಸ್‌ನವರು ಸುಮಾರು 50 ಮಂದಿ ಇದ್ದಾರೆ. ಇವುಗಳಲ್ಲಿ 19 ಕಮ್ಯೂನಿಸ್ಟ್ ಶಾಸನ ಸಭಾಸದಸ್ಯರು (ಒಟ್ಟು 64ಕ್ಕೆ) ಇವುಗಳಲ್ಲಿ ಕಾಂಗ್ರೆಸ್ ಶಾಸನಸಭಾ ಸದಸ್ಯರು 15 (ಒಟ್ಟು 43ಕ್ಕೆ) ಮಂದಿ ಇದ್ದಾರೆ. ರಾಜ್ಯಕೈಗಾರಿಕಾ ಸಂಬಂಧಗಳ ಸಮಿತಿಯಲ್ಲಿ ಎ.ಐ.ಟಿ.ಯು.ಸಿ. ಮತ್ತು ಐ.ಎನ್.ಟಿ.ಯು.ಸಿ.ಗಳು ಸಮಾನ ಪ್ರಾತಿನಿಧ್ಯ ಪಡೆದಿವೆ. (ಕೇರಳದಲ್ಲಿ ಎ.ಐ.ಟಿ.ಯು.ಸಿ.ಯು ಐ.ಎನ್.ಟಿ.ಯು.ಸಿ.ಗಿಂತ ಎಷ್ಟೋ ಹೆಚ್ಚು ಪ್ರಬಲವಾಗಿದ್ದರೂ ಸಮಾನ ಪ್ರಾತಿನಿಧ್ಯ ಕೊಡಲಾಗಿದೆ.)

ವಿರೋಧ ಪಕ್ಷದ ನಾಯಕರುಗಳಿಗೆ ವಾಸ್ತವಾಂಶಗಳು ತಿಳಿದಿಲ್ಲವೆಂದಲ್ಲ. ಆದರೆ ಅವರು ಹೀಗೆ ಸುಳ್ಳು ಆರೋಪ ಏಕೆ ಮಾಡುತ್ತಾರೆ? ಯಾಕೆಂದರೆ ಆಡಳಿತೆಯ ಮೇಲೆ ಜನಪ್ರಿಯ ಹತೋಟಿ ಮತ್ತು ಜನತೆಯ ಭಾಗವಹಿಸುವುದು ಅವರಿಗೆ ಬೇಕಿಲ್ಲ.

ಮೂರನೆಯದು, ಕೆಲಸಗಾರರು ಸ್ವತಃ ತಾವೇ ಸಹಕಾರಿ ಸಂಸ್ಥೆಗಳನ್ನು ರಚಿಸಿಕೊಳ್ಳುವುದಕ್ಕೆ ಉತ್ತೇಜನ ಕೊಡುವ ನೀತಿ. ಈ ಸಂಸ್ಥೆಗಳ ಮೂಲಕ ಸಣ್ಣ ಕೈಗಾರಿಕೆಗಳನ್ನು ಅಥವಾ ಸಾರ್ವಜನಿಕ ಕಾರ್ಯಗಳನ್ನು ನಡೆಸುವಂತಾಗಲು ಮತ್ತು ಕಂಟ್ರಾಕ್ಟರುಗಳ ದಬ್ಬಾಳಿಕೆ ಮತ್ತು ಶೋಷಣೆಯಿಂದ ಬಿಡುಗಡೆ ಹೊಂದುವುದಕ್ಕೆ ಉತ್ತೇಜನ ಕೊಡುವ ನೀತಿ.

ಕೇರಳ ಸರಕಾರವು ಕಳೆದ ವರ್ಷ ಎರಡು ದೊಡ್ಡ ಸಾರ್ವಜನಿಕ ಕಾರ್ಯವನ್ನು ಕಾರ್ಮಿಕರ ಕಂಟ್ರಾಕ್ಟ್ ಸೊಸೈಟಿಗಳಿಗೆ ಕೊಟ್ಟಿತು—ಒಂದು ಆಲೆಪ್ಪಿ—ಶೆರ್ತಲ್ಲೈ ಕಾಲುವೆ ಮತ್ತು ಎರಡನೆಯದು ಸಮುದ್ರದ ಉಬ್ಬರವನ್ನು ತಡೆಯಲು ದಂಡೆ ನಿರ್ಮಿಸುವುದು. ಈ ಎರಡು ಕೆಲಸಗಳಿಗೂ ಕೆಲವು ಲಕ್ಷ ರೂ. ವೆಚ್ಚವಾಗುತ್ತದೆ. ಈ ಕೆಲಸವನ್ನು ಕಾರ್ಮಿಕರ ಕಂಟ್ರಾಕ್ಟ್ ಸೊಸೈಟಿಗೆ ಕೊಟ್ಟದರಿಂದ ಸರಕಾರಕ್ಕೆ ಹಣ ಉಳಿಯಿತಲ್ಲದೆ ಕೆಲಸಗಾರರಿಗೆ ಸರಿಯಾದ ಕೂಲಿ ಸಿಗುತ್ತಿದೆ ಮತ್ತು ಕಾರ್ಯವೂ ಉತ್ತಮವಾಗಿ ಸಾಗುತ್ತಿದೆ.

ಈ ಅನುಭವದಿಂದ ಸರಕಾರವು ಎನ್. ಇ. ಎಸ್. ಬ್ಲಾಕ್‌ಗಳ ಆಧಾರದ ಮೇಲೆ ಕಾರ್ಮಿಕ ಕಂಟ್ರಾಕ್ಟ್ ಸೊಸೈಟಿಗಳನ್ನು ಆರಂಭಿಸಲು ನೆರವಿತ್ತು ಸ್ಥಳೀಕ ಕಾಮಗಾರಿಗಳನ್ನು ಅವಕ್ಕೆ ವಹಿಸಲು ಯೋಜನೆಯನ್ನು ತಯಾರಿಸಿದೆ. ಈ ವರ್ಷದಲ್ಲಿ ಅಂಥ ಇಪ್ಪತ್ತೈದು ಸೊಸೈಟಿಗಳು ರಿಜಿಸ್ಟರ್ ಆಗಿವೆ.

ಕಟ್ಟಂಪಳ್ಳಿ ನೀರಾವರೀ ಯೋಜನೆಯ ಮಣ್ಣಿನ ಕಾರ್ಯವೆಲ್ಲವೂ ಅದಕ್ಕಾಗಿ ರಚಿತವಾಗಿರುವ ಕಾರ್ಮಿಕರ ಕಂಟ್ರಾಕ್ಟ್ ಸೊಸೈಟಿಯಿಂದ ನಡೆಸಲಾಗುವುದು.

ಶೇಂದಿ ತೆಗೆಯುವವರು ಒಂದು ಸೊಸೈಟಿಯನ್ನು ಸ್ಥಾಪಿಸಿಕೊಂಡು ತನ್ಮೂಲಕ ಅನೇಕ ತಾಲ್ಲೂಕಾಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ವರ್ಷ ಸರಕಾರವು ಟೆಂಡರುಗಳನ್ನು ಕರೆಯದೆಯೇ ಈ ಸೊಸೈಟಿಗೆ ಕಂಟ್ರಾಕ್ಟು ಕೊಟ್ಟಿದೆ.

ಈ ಯಾವ ಕ್ರಮಗಳನ್ನೂ ಸಹ ವಿರೋಧ ಪಕ್ಷಗಳ ನಾಯಕರಿಗೆ ಹಿಡಿಸಿಲ್ಲ. ಇವನ್ನು ಕಮ್ಯೂನಿಸ್ಟರಿಗೆ ಸಹಾಯ ಮಾಡುವ ಪಾರ್ಟಿಯನ್ನು ಬಲಗೊಳಿಸುವ ಕಾರ್ಯವೆಂದು ಒಂದು ಬಗೆಯ ಲಂಚದ ಕಾರ್ಯವೆಂದೂ ಜರೆಯುತ್ತಾರೆ.

ಈ ಟೀಕೆಗಳ ಸಾರಾಂಶ ಇಷ್ಟೆ: ಹಳೆಯ ಕಂಟ್ರಾಕ್ಟ್ ಪದ್ಧತಿಯನ್ನು ಏಕೆ ಬದಲಿಸಬೇಕು! ನಾನು ಹೆಚ್ಚು ಉದಾಹರಣೆಗಳನ್ನು ನೀಡಬಯಸುವುದಿಲ್ಲ. ಇವೆಲ್ಲದರಿಂದ ಸ್ಪಷ್ಟವಾಗುವ ಅಂಶವೆಂದರೆ, ಎರಡು ಬಗೆಯ ದೃಷ್ಟಿಕೋಣಗಳಿವೆ ಮತ್ತು ಎರಡು ಧೋರಣೆಗಳಿವೆ ಮತ್ತು ಈ ಎರಡು ಧೋರಣೆಗಳ ನಡುವೆ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿರುವ ಸರಕಾರ ಅಧಿಕಾರಕ್ಕೆ ಬಂದಂದಿನಿಂದ ತೀವ್ರವಾದ ಹೋರಾಟ ನಡೆಯುತ್ತಿದೆ ಎಂಬುದಾಗಿದೆ.

ಮೊದಲನೆಯ ಧೋರಣೆ ಹಳತನ್ನು ಹಾಗೆಯೇ ಇರಿಸಿಕೊಳ್ಳುವುದು, ಹಳೆಯ ಪದ್ಧತಿಗಳನ್ನೂ ಕ್ರಮಗಳನ್ನೂ ಮುಂದುವರಿಸುವುದು; ಇದು ಸ್ವಾಭಾವಿಕವಾಗಿ ಬೇರೂರಿದ ಹಿತಸಾಧಕರ ಪರವಾಗಿ ಹೋಗುತ್ತದೆ.

ಎರಡನೆಯ ಧೋರಣೆ ಹಳೆಯದನ್ನು ಬದಲಾಯಿಸುವುದು, ಹೊಸ ದೃಷ್ಟಿಕೋಣವನ್ನು ಮತ್ತು ಹೊಸ ಕ್ರಮಗಳನ್ನು ತರುವುದು, ಸಾಮಾನ್ಯ ಜನರಿಗೆ ಅವರ ಹಿತಸಾಧನೆಯಾಗುವಂತೆ ನೆರವು ನೀಡುವುದು.

ಈ ಹೋರಾಟವು ಕಮ್ಯೂನಿಸ್ಟ್ ನೇತೃತ್ವದಲ್ಲಿರುವ ಕೇರಳ ಸರಕಾರ ಸ್ವಲ್ಪ ಕಾಲ ಮಾತ್ರ ಇದ್ದು ಹೋಗುವುದು ಎಂಬುದರ ಬದಲು ಅದು ನಿಜವಾಗಿಯೂ ಸ್ಥಾಯಿಯಾಗಿದೆ ಎಂಬುದು ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಿದ್ದಂತೆ ತೀವ್ರಗೊಳ್ಳುತ್ತಿದೆ.

ಈ ಹೋರಾಟದಲ್ಲಿ ಕೊನೆಯ ಫಲಿತಾಂಶದ ಬಗ್ಗೆ ಸಂಶಯವೇನಿಲ್ಲ. ಜನಪ್ರಿಯ ಶಕ್ತಿಗಳು ಮತ್ತು ಆ ಶಕ್ತಿಗಳನ್ನು ಪ್ರತಿನಿಧಿಸುವ ಸರಕಾರವು ವಿಜಯಿಯಾಗುತ್ತದೆ.

ಹಿಂದುಳಿದ ಜಿಲ್ಲೆಗಳಿಗೆ ಅಭಿವೃದ್ಧಿ ಮಂಡಲಗಳು ರಚನೆಯಾಗಲಿ

ಮೈಸೂರು ವಿಧಾನ ಸಭೆಯಲ್ಲಿ ಅಂದಾಜು ಪತ್ರಿಕೆಯ ಮೇಲೆ ನಡೆಯುತ್ತಿರುವ ಚರ್ಚೆಯಲ್ಲಿ ಭಾಷಣ ಮಾಡುತ್ತಾ ಇಡಿ ಮತದಾರ ಸಂಘದಿಂದ ಆರಿಸಿಹೋದ ಶ್ರೀ ಎಂ. ಕೆ. ಸುರುಪೂರವರು ಬಿಜಾಪುರ, ಗುಲ್ಬರ್ಗ, ರಾಯಚೂರ, ಕೋಲಾರ ಮೊದಲಾದ ಜಿಲ್ಲೆಗಳು ಸರ್ವ ವಿಧದಿಂದಲೂ ಹಿಂದುಳಿದಿದ್ದು, ಈ ಪ್ರದೇಶಗಳ ಸುಧಾರಣೆಯ ಸಲುವಾಗಿ, ಮಲೆನಾಡ ಅಭಿವೃದ್ಧಿ ಮಂಡಲಗಳಂತೆಯೇ, ಅಭಿವೃದ್ಧಿ ಮಂಡಲಗಳನ್ನು ನೇಮಿಸಬೇಕೆಂದು ಮಾಡಿದ ಸೂಚನೆಯು ಸ್ವಾಗತಾರ್ಹವಿದೆ, ಮತ್ತು ಸಕಾಲಿಕವಿದೆ.

ಬಿಜಾಪುರ, ರಾಯಚೂರ, ಗುಲ್ಬರ್ಗ, ಕೋಲಾರ ಜಿಲ್ಲೆಗಳು ಯಾವಾಗಲೂ ಬರಗಾಲಕ್ಕೆ ತುತ್ತಾಗುತ್ತಿವೆ. ಈ ಜಿಲ್ಲೆಗಳಲ್ಲಿ ಭೂಮಿ ಫಲವತ್ತಾಗಿದ್ದರೂ, ಪ್ರಕೃತಿಯ ದೇಣಿಗೆಯಾಗಿ ಹೊಳೆಗಳಲ್ಲಿ ನೀರು ಹರಿಯುತ್ತಿದ್ದರೂ, ನೀರಾವರಿ ಯೋಜನೆಗಳಿಲ್ಲದಿರುವುದರಿಂದ, ಬರೇ ಮಳೆಯ ಮೇಲೆ ಅವಲಂಬಿಸಿ ಒಕ್ಕಲತನ ಮಾಡುತ್ತಿರುವುದರಿಂದ, ಅಕಾಲಿಕ ಮತ್ತು ಅತಿವೃಷ್ಟಿ ಮಳೆಯಾದಾಗಲೆಲ್ಲ ರೈತರು ಉಪವಾಸ ಬೀಳುವ ಸಂಭವವೇ ಹೆಚ್ಚು. ಕರ್ನಾಟಕದ ಕಣಜದಂತಿರುವ ಬಿಜಾಪುರ, ಗುಲ್ಬರ್ಗ ಜಿಲ್ಲೆಗಳು ಮಳೆಯ ಅಭಾವದಿಂದಾಗಿ ಮೇಲಿಂದ ಮೇಲೆ ದುಷ್ಕಾಳಕ್ಕೆ ತುತ್ತಾಗುತ್ತಿರುವ ಸಂಗತಿ ಚರಿತ್ರಾರ್ಹವಾಗಿದೆ.

ಈ ನಾಲ್ಕು ಜಿಲ್ಲೆಗಳಲ್ಲಿ ಬಂಗಾರ, ಕಬ್ಬಿಣ, ಮ್ಯಾಂಗನೀಸ, ಅಸಬೆಸ್ಟೋ, ಸ್ಲೇಟ ಬಣ್ಣದ ಕಲ್ಲುಗಳು, ಪರ್ಸಿ ಕಲ್ಲುಗಳು, ಮೊದಲಾದ ಖನಿಜ ಸಂಪತ್ತು ಅಪಾರವಾಗಿದ್ದರೂ ಕೂಡ, ಕರ್ನಾಟಕ ಮಲೆನಾಡಿನ ಸಂಪತ್ತು ಹೇಗೆ ದುರ್ಲಕ್ಷಿಸಲ್ಪಟ್ಟಿದೆಯೋ, ಅದೇ ರೀತಿಯಲ್ಲಿ ಈ ಪ್ರದೇಶಗಳ ಖನಿಜಸಂಪತ್ತುಗಳು ಕರ್ನಾಟಕದ ಆರ್ಥಿಕ ಮತ್ತು ಔದ್ಯೋಗಿಕ ಪ್ರಗತಿಗಾಗಿ ಉಪಯೋಗಿಸಲ್ಪಡುತ್ತಿಲ್ಲ.

ಈ ಭಾಗದಲ್ಲಿ ರಸ್ತೆ ಸಾರಿಗೆಯ ಅನಾನುಕೂಲತೆಯಿಂದಾಗಿ, ಹಳ್ಳಿಗಳೊಳಗೆ ಸಂಪರ್ಕ ಬೆಳೆದಿಲ್ಲ. ಹಳ್ಳಿಗಳ ಸಂಪರ್ಕವಿಲ್ಲದಿರುವುದರಿಂದ, ಗುನ್ಹೆಗಳು, ಸಮಾಜ ವಿರೋಧಕ ಚಟುವಟಿಕೆಗಳು ಹಳ್ಳಿಗಳಲ್ಲಿ ದೈನಂದಿನ ಹೆಚ್ಚಾಗುತ್ತಿದೆ. ಮಳೆಗಾಲದಲ್ಲಂತೂ ಹಲವಾರು ಹಳ್ಳಿಗಳಿಗೆ ಸಾಯುವುದೇ ಅಸಾಧ್ಯವಾಗಿ, ಆಡಳಿತೆ ಸಂಬಂಧವಿಲ್ಲದಂತಾಗಿ, ಹಳ್ಳಿಗಳು ನಡುಗಡ್ಡೆಗಳಾಗಿ ಪರಿವರ್ತನೆಗೊಳ್ಳುತ್ತವೆ. ಹೀಗಾಗಿ, ಇಂಥ ಹಳ್ಳಿಗಳಲ್ಲಿ ಜನಜೀವನ ಅಸಂಭವನೀಯವಾಗುತ್ತದೆ. ಜೀವ ಮತ್ತು ಆಸ್ತಿಗಳಿಗೆ ಸುರಕ್ಷಿತಯಿಲ್ಲದಂತಾಗುತ್ತದೆ.

ಹಳ್ಳಿ-ಹಳ್ಳಿಗಳೊಳಗೂ ಮತ್ತು ಹಳ್ಳಿ-ಪೇಟೆಗಳೊಳಗೂ ದೈನಂದಿನ ಸಂಪರ್ಕ ಬೆಳೆಯದಿದ್ದರೆ, ಜನರ ಸಾಂಸ್ಕೃತಿಕ ಜೀವನ ಸುಧಾರಿಸಲು ಸಾಧ್ಯವಿಲ್ಲ. ಶಿಕ್ಷಣ ಮತ್ತು ಇತರ ರಂಗಗಳಲ್ಲಿ ಈ ಭಾಗದ ಜನರು ಹಿಂದುಳಿಯಲಿಕ್ಕೆ ಇದೇ ಕಾರಣ.

ನಮ್ಮ ಪ್ರಾಂತದ ಇತರ ಭಾಗಗಳಂತೆಯೇ ಬಿಜಾಪುರ, ಗುಲ್ಬರ್ಗ, ರಾಯಚೂರ, ಕೋಲಾರಗಳನ್ನು ಪರಿಗಣಿಸಿದರೆ, ಮತ್ತು ಎಲ್ಲ ಭಾಗಗಳನ್ನೂ ಸಂಸಮಾನವಾದ ದೃಷ್ಟಿಕೋನದಿಂದ ನೋಡಿದರೆ, ಹಿಂದುಳಿದ ಈ ಪ್ರದೇಶಗಳು ಮುಂದುವರಿದ ಜಿಲ್ಲೆಗಳ ಮಟ್ಟವನ್ನು ತಲ್ಪಲಿಕ್ಕೆ ಸಾಧ್ಯವೇ ಇಲ್ಲ. ಈ ಜಿಲ್ಲೆಗಳು ಒಂದಕ್ಕೊಂದು ಹೊಂದಿಕೊಂಡಿರದಿರುವುದರಿಂದ, ಒಂದೇ ಅಭಿವೃದ್ಧಿ ಮಂಡಲವನ್ನು ರಚಿಸಕ್ಕಾಗುವುದಿಲ್ಲ. ಆದರೆ ಬಿಜಾಪುರ, ರಾಯಚೂರ, ಗುಲ್ಬರ್ಗ ಜಿಲ್ಲೆಗಳು ಒತ್ತಟ್ಟಗಿವೆ. ಈ ಮೂರು ಜಿಲ್ಲೆಗಳ ಸಲುವಾಗಿ ಒಂದು ಮಂಡಲವನ್ನೂ, ಕೋಲಾರದ ಸಲುವಾಗಿ ಒಂದು ಮಂಡಲವನ್ನೂ ರಚಿಸಬಹುದು.

ಜಿಲ್ಲಾ ಲೋಕಲ್ ಬೋರ್ಡುಗಳನ್ನು ರದ್ದುಪಡಿಸಿ, ತಾಲ್ಲೂಕ್ ಅಭಿವೃದ್ಧಿ ಮಂಡಲಗಳಿಗೆ ಮತ್ತು ಗ್ರಾಮ ಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕೆಂದು ಸರಕಾರದವರು ವಿಚಾರಿಸುತ್ತಿರುವಾಗ, ಆಡಳಿತೆ ದೃಷ್ಟಿಯಿಂದ ಹಳ್ಳಿಗಳಿಗೆ ಹೆಚ್ಚು ಸಂಪರ್ಕ ಇರುವಂತೆ ರಸ್ತೆ ಸಾರಿಗೆ ಸುಧಾರಿಸಿ ಇತರ ಅಭಿವೃದ್ಧಿ ಕೆಲಸಗಳನ್ನು ಕೈಕೊಳ್ಳುವುದು ಅತ್ಯಗತ್ಯವೆಂಬುದನ್ನು ಯಾರೂ ಅಲ್ಲಗಳೆಯಲಾರರು.

ಹಿಂದುಳಿದ ಈ ಪ್ರದೇಶಗಳು ಅಭಿವೃದ್ಧಿಗೊಳ್ಳಬೇಕಾದರೆ, ಸರಕಾರದವರು ಇದರ ಕಡೆ ಹೆಚ್ಚು ಲಕ್ಷ ಹಾಕುವುದು ಅತ್ಯಗತ್ಯ. ಇದರ ಸಲುವಾಗಿ ಅಭಿವೃದ್ಧಿ ಮಂಡಲಗಳನ್ನು ನೇಮಿಸಿ, ಈ ಅಭಿವೃದ್ಧಿ ಮಂಡಲಗಳ ಮೂಲಕ, ಈ ಭಾಗದ ಪರಿಶೀಲನೆ ನಡೆಸಿ, ಈ ಭಾಗದ ಕೈಗಾರಿಕೆ, ರಸ್ತೆ-ಸಾರಿಗೆ, ಶಿಕ್ಷಣ ಮತ್ತು ಸಂಸ್ಕೃತಿಗಳ ಬೆಳವಣಿಗೆಯ ಸಲುವಾಗಿ ಸರಕಾರದವರು ಹೆಚ್ಚು ಗಮನ ಕೊಡಲೇಬೇಕು. ಈ ಭಾಗದ ಎಂ.ಎಲ್.ಎ. ಗಳೂ, ಸಂಘ-ಸಂಸ್ಥೆಗಳೂ, ಮೈಸೂರು ಸರಕಾರದವರು, ಬಿಜಾಪುರ, ಗುಲ್ಬರ್ಗ, ರಾಯಚೂರ, ಕೋಲಾರ ಮೊದಲಾದ ಹಿಂದುಳಿದ ಜಿಲ್ಲೆಗಳ ಸುಧಾರಣೆಯ ಸಲುವಾಗಿ ಇಂಥ ಅಭಿವೃದ್ಧಿ ಮಂಡಲಗಳನ್ನು ನೇಮಿಸಬೇಕೆಂದು ಸರಕಾರದ ಮೇಲೆ ಒತ್ತಾಯ ತರಬೇಕು. ಮತ್ತು ಸರಕಾರದವರು ಅತಿ ತೀವ್ರದಲ್ಲಿಯೇ ಈ ದಿಶೆಯಲ್ಲಿ ಕೆಲಸ ಕೈಗೊಳ್ಳುವಂತೆ ಮಾಡಬೇಕು.

—ಎನ್. ಕೆ. ಉಪಾಧ್ಯಾಯ

ಕಮ್ಯೂನಿಸ್ಟ್ ಪಾರ್ಟಿಯ ಹೊಸ ಘಟನಾವಳಿ

(೫ನೇ ಪುಟದಿಂದ)

ಹೊಂದಲು ಏಕತೆರನಾದ ಹೋರಾಟ ನಡೆಸುತ್ತಿರುವ ವಿಶ್ವದ ನಾನಾ ರಾಷ್ಟ್ರಗಳ ಕಾರ್ಮಿಕರ ನಡುವೆ ಇರುವ ಸಮಾನತೆಯ ಭಾವ, ಸೋದರತ್ವ ಮತ್ತು ಪರಸ್ಪರ ಸಹಕಾರ ಎಂಬುದು.

ಡಾ|| ಅಧಿಕಾರಿಯವರು ಶ್ರಮಜೀವಿ ಅಂತರರಾಷ್ಟ್ರೀಯತೆ ಭಾವನೆಯ ಬೆಳವಣಿಗೆಯನ್ನು ಕುರಿತು ವಿವರಿಸಿದರು. ಶ್ರಮಜೀವಿ ಅಂತರರಾಷ್ಟ್ರೀಯ ಭಾವನೆಯನ್ನು ಮೊದಲು ಮಂಡಿಸಿದವರು ಕಾರ್ಲ್ ಮಾರ್ಕ್ಸ್ ಮತ್ತು ಲೆನಿನ್‌ರವರು ಚರಿತ್ರಾರ್ಹವಾದ ರೀತಿ ಈ ಕಾರ್ಯವನ್ನು ಕೈಗೊಂಡರು, ಕಮ್ಯೂನಿಸ್ಟ್ ಅಂತರರಾಷ್ಟ್ರೀಯ ಸಂಸ್ಥೆ (ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್)ಯನ್ನು ಸ್ಥಾಪಿಸಿದರು. ಇದು ಬಂಡವಾಳಶಾಹಿ, ವಸಾಹತು ಮತ್ತು ಅರೆ ವಸಾಹತು ರಾಷ್ಟ್ರಗಳಲ್ಲಿ ಕಮ್ಯೂನಿಸ್ಟ್ ಪಕ್ಷಗಳು ಬೆಳೆಯುವಂತೆ ಮಾಡಿತು.

ಪ್ರಸ್ತಾವನೆಯಲ್ಲಿ ಏಕತೆರನಾದ ಅಂತರರಾಷ್ಟ್ರೀಯ ಮಹತ್ಕಾರ್ಯಗಳನ್ನು ನಿರ್ವಹಿಸುವುದರಲ್ಲಿ ಎಲ್ಲ ರಾಷ್ಟ್ರಗಳ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ನಡುವೆ ಸಂಗಾತಿಗಳ ಐಕ್ಯತೆ ಮತ್ತು ಸಹಕಾರದ ಜರೂರು ಅಗತ್ಯತೆಯನ್ನು ಒತ್ತಿ ಹೇಳುತ್ತ ಅದು ನಮ್ಮ ಪಾರ್ಟಿಯ ಸ್ವತಂತ್ರತೆಯನ್ನೂ ಒತ್ತಿ ಹೇಳುತ್ತದೆ. ನಮ್ಮ ಪಾರ್ಟಿಯ ಧೋರಣೆಗಳನ್ನು ನಮ್ಮ ಜನತೆಯ ಹಿತಗಳು ಮತ್ತು ಅವಶ್ಯಕತೆಗಳಿಗನುಗುಣವಾಗಿ ರೂಪಿಸಲಾಗುವುದೆಂಬುದನ್ನು ಮತ್ತು ತೀರ್ಮಾನಗಳಿಗೆ ನಾವು ನಮ್ಮ ಜನತೆಗೆ ಜವಾಬುದಾರರಾಗಿರುವುದೆಂಬುದನ್ನು ಒತ್ತಿ ಹೇಳುತ್ತದೆ.

ಕಮ್ಯೂನಿಸ್ಟ್ ಪಾರ್ಟಿಗೆ ಹೊರಗಡೆಯಿಂದ ನಿರ್ದೇಶಗಳು ಬರುತ್ತವೆ, ನಾವು ನಮ್ಮ ಪಾರ್ಟಿಯ ಧೋರಣೆಗಳನ್ನು ಯಾವುದೋ ಒಂದು ರಾಷ್ಟ್ರದ ಹಿತಗಳಿಗನುಸಾರವಾಗಿ ಬದಲಿಸುತ್ತೇವೆ ಎಂದು ಕಮ್ಯೂನಿಸ್ಟ್ ಪಾರ್ಟಿಯ ಮೇಲೆ ಅಪಪ್ರಚಾರ ನಡೆಸುವವರಿಗೆ ಇದು ಸರಿಯಾದ ಉತ್ತರವಾಗಿದೆ.

ತನ್ನ ಘಟನಾವಳಿಯ ಪ್ರಸ್ತಾವನೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ಶ್ರಮಜೀವಿ ಅಂತರರಾಷ್ಟ್ರೀಯತೆಯನ್ನು ಹೇಳುವಾಗ ಪಾರ್ಟಿಯ ಸ್ವತಂತ್ರತೆಯನ್ನು ಧೋರಣೆಗಳ ಬಗ್ಗೆ ಭಾರತ ಜನತೆಗೆ ತನ್ನ ಜವಾಬುದಾರಿಯನ್ನು ಒತ್ತಿ ಹೇಳಿರುವುದು, ಪಾರ್ಟಿಯು ಮಾರ್ಕ್ಸ್‌ವಾದದ ನಿಜವಾದ ಭಾವನೆಯಲ್ಲಿ ಅಂತರರಾಷ್ಟ್ರೀಯತೆಯನ್ನು ಜನತೆಯ ರಾಷ್ಟ್ರಪ್ರೇಮವನ್ನೂ ಒಂದುಗೂಡಿಸುತ್ತದೆ.

ಎಲ್ಲ ವೃತ್ತಗಳಲ್ಲಿ ತೀವ್ರ ಮುನ್ನಡೆಯ ಭರವಸೆಯನ್ನೀಯುವ ಮತ್ತು ವ್ಯಕ್ತಿಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯ, ಪತ್ರಿಕಾಸ್ವಾತಂತ್ರ್ಯ ಮತ್ತು ರಾಜಕೀಯ ಸಂಘಟನೆಯ ಹಕ್ಕನ್ನು ಒಳಗೊಂಡು ಎಲ್ಲ ಸಂಘಟನೆ ಸ್ವಾತಂತ್ರ್ಯ ಅದಷ್ಟು ಹೆಚ್ಚಾಗಿ ಇವನ್ನು ವಿಸ್ತರಿಸುವಂಥ ಸಮಾಜವಾದೀ ಸಮಾಜವನ್ನು ನಿರ್ಮಿಸಲು ಕಮ್ಯೂನಿಸ್ಟ್ ಪಾರ್ಟಿಯು ಶ್ರಮಿಸುತ್ತದೆ ಎಂದು ಅಧಿಕಾರಿಯವರು ಒತ್ತಿಹೇಳಿದರು.

ಅಂದರೆ ವ್ಯಕ್ತಿ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಪತ್ರಿಕಾ ಮತ್ತು ಸಂಘಟನಾ ಸ್ವಾತಂತ್ರ್ಯವು ಆದಷ್ಟು ಹೆಚ್ಚು ವಿಸ್ತಾರವಾಗಿರುತ್ತದೆ ಎಂದರ್ಥ. ಸಮಾಜವಾದೀ ಸಮಾಜದಲ್ಲಿ ಮಾತ್ರ ಅಂಥ ವಿಶಾಲವಾದ ಸ್ವಾತಂತ್ರ್ಯವು ಇರಲು ತಕ್ಕ ಸ್ಥಿತಿಗತಿಗಳು, ಅದಕ್ಕೆ ಅಗತ್ಯವಾದ ಆರ್ಥಿಕ ಸಮಾನತೆಯನ್ನುಂಟುಮಾಡಿ, ಮಾನವನಿಂದ ಮಾನವನ ಶೋಷಣೆಯನ್ನು ಕೊನೆಗಾಣಿಸುವುದರ ಮೂಲಕ ಏರ್ಪಡಿಸಲು ಸಾಧ್ಯ.

ಇಲ್ಲಿ ನಮೂದಿಸಲಾಗಿರುವ ಹೊಸ ಅಂಶವೆಂದರೆ, ನಮ್ಮ ದೃಷ್ಟಿಯಲ್ಲಿರುವ ಸಮಾಜವಾದದಲ್ಲಿ ವಿರೋಧ ರಾಜಕೀಯ ಪಕ್ಷಗಳಿಗೆ ಸಂಘಟನಾ ಸ್ವಾತಂತ್ರ್ಯವಿರುವುದು ಎಂಬುದು. ಕಮ್ಯೂನಿಸ್ಟರು ಒಮ್ಮೆ ಅಧಿಕಾರಕ್ಕೆ ಬಂದರೆಂದರೆ ಎಲ್ಲ ವಿರೋಧ ಪಕ್ಷಗಳನ್ನು ನಿರ್ಮೂಲಗೊಳಿಸುವರು ಎಂದು ಅಪಪ್ರಚಾರ ಮಾಡುವವರಿಗೆ ಇದು ನೇರವಾದ ಉತ್ತರವಾಗಿದೆ.

ಈ ರೀತಿಯಲ್ಲಿ ಹೊಸ ಪ್ರಸ್ತಾವನೆಯು ಕಮ್ಯೂನಿಸ್ಟ್‌ಪಾರ್ಟಿ ಸಂಘಟನೆಯ ಮೂಲ ತತ್ವಗಳಿಗೆ ಅನುಗುಣವಾಗಿರುವುದೇ ಅಲ್ಲದೆ, ವಿಶ್ವದ ಹಾಗೂ ನಮ್ಮ ದೇಶದ ಬದಲಾಗಿರುವ ಪರಿಸ್ಥಿತಿಗಳಿಗೆ ಸರಿಯಾಗಿ ಅಳವಡಿಸುತ್ತದೆ.

ಇದರಿಂದಾಗಿ ಈ ಮಹತ್ವದ ಘಟನಾವಳಿಯು ಸಮಾಜವಾದಕ್ಕಾಗಿ ನಿಷ್ಠಾವಂತವಾಗಿ ಶ್ರಮಿಸಬಯಸುವ ಎಲ್ಲ ಪ್ರಜಾಪ್ರಭುತ್ವವಾದಿ ಮತ್ತು ದೇಶಪ್ರೇಮಿ ಜನತೆಯನ್ನು ಪ್ರಬಲವಾಗಿ ಆಕರ್ಷಿಸುವುದರಲ್ಲಿ ಮತ್ತು ಅವರನ್ನು ಪಾರ್ಟಿಗೆ ಸೇರುವಂತೆ ಪ್ರೇರೇಪಿಸುವುದರಲ್ಲಿ ಅಥವಾ ನಮ್ಮ ಪಾರ್ಟಿಗೆ ಬೆಂಬಲ ಕೊಡುವಂತೆ ಮಾಡುವುದರಲ್ಲಿ ನಿಜಕ್ಕೂ ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ.

—('ನ್ಯೂಯೇಜ್' ಪತ್ರಿಕೆಯಿಂದ)

ಓದುಗರ ಓಲೆ

(೭ನೇ ಪುಟದಿಂದ)

ದರೆ ಪಡಿಸಿ ತನ್ಮೂಲಕ ಹೈಸ್ಕೂಲು ವಿದ್ಯಾರ್ಥಿಗಳಿಗೆ ತುಂಬಾ ಅನಾನುಕೂಲ ಮಾಡಿರುತ್ತಾರೆ. ತಾವು ಎಷ್ಟೇ ಹೇಳಿಕೊಂಡರೂ, ಅನೇಕ ಪತ್ರಿಕೆಗಳಲ್ಲಿ ಪ್ರಕಟಿಸಿದಾಗ್ಯೂ ಸರ್ಕಾರ ಈ ಕಡೆ ಗಮನ ಕೊಡದೆ ಇರುವುದು ಶೋಚನೀಯ. ಅಲ್ಲದೆ ಇಂತಹ ವರ್ತನೆ ಸರ್ಕಾರದ ಅಸಹಾಯಕತೆಯನ್ನು ತೋರಿಸುತ್ತದಲ್ಲದೆ ಮೇಲ್ಪಟ್ಟ ಅಧಿಕಾರಿಗಳು ಎಷ್ಟರ ಮಟ್ಟಿಗೆ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿರುವರೆಂಬುದು ತಿಳಿಯುತ್ತದೆ. 1957–58ನೇ ಸಾಲಿನ ಕ್ಲಾಸು ಪರೀಕ್ಷೆಗಳಲ್ಲಿ ಅನೇಕ ಮಂದಿ ವಿದ್ಯಾರ್ಥಿಗಳು ಕೇವಲ ಹಿಂದಿ ಮತ್ತು ಕನ್ನಡ ಪರೀಕ್ಷೆಗಳಲ್ಲಿ ಮಾತ್ರ ಫೈಲಾಗಿರುತ್ತಾರೆ. ಅದರಲ್ಲೂ ಫೈಲಾಗಿರುವವರಲ್ಲಿ ಹೆಚ್ಚು ಮಂದಿ ಹಳ್ಳಿಯ ಹುಡುಗರು. ಏಕೆಂದರೆ ಟೌನ್‌ನ ಹುಡುಗರು ಸಾಮಾನ್ಯವಾಗಿ ಉಪಾಧ್ಯಾಯರಲ್ಲಿ ಪ್ರೈವೇಟ್ ಪಾಠಕ್ಕೆ ಹೋಗುತ್ತಾರೆ, ತತ್ಪರಿಣಾಮದಿಂದ ಅವರು ಪಾಸ್ ಆಗೇ ಆಗುತ್ತಾರೆ. ಅಂತಹ ದಾಕ್ಷಿಣ್ಯವಿಲ್ಲದೆ ಹಳ್ಳಿಯ ಬಡರೈತರ ಮಕ್ಕಳನ್ನು ಕೇಳುವವರಾರು?

ಪ್ರತಿ ಹೈಸ್ಕೂಲು ಉಪಾಧ್ಯಾಯರ ಮನೆಯೂ ಒಂದು ಸ್ವಂತ ಶಾಲೆಯಂತಿವೆ. ಇವರು ತಮ್ಮ ಸ್ವಂತ ವರಮಾನದಲ್ಲಿ ಸ್ವಲ್ಪ ಭಾಗವನ್ನು ಸಂಭಾವನೆಯಾಗಿ ಸಂಬಂಧಪಟ್ಟ ಮುಖ್ಯ ಉಪಾಧ್ಯಾಯರಿಗೆ ಸಲ್ಲಿಸುತ್ತಿರುವಂತಿದೆ. ಅಲ್ಲದೆ ಹೈಸ್ಕೂಲು ಸೆಕ್ರೆಟರಿಯವರ ಮನೆಯ ವಿದ್ಯಾರ್ಥಿಗಳಿಗೆ ಪುಕ್ಸಟ್ಟೆ ಪಾಠಗಳೂ, ಇಲ್ಲವೆ ಅವರ ಮನೆಯ ಮುಂದೆ ಪ್ರತಿನಿತ್ಯವೂ ದರ್ಶನ ಪಡೆದು ಅವರು ಹೇಳುವ ವಿದ್ಯಾರ್ಥಿಗಳನ್ನು ಚೆನ್ನಾಗಿ ನೋಡಿಕೊಂಡು ಅವರ ಪ್ರಸನ್ನತೆಯನ್ನು ಪಡೆದಿರುತ್ತಾರೆ.

ಈ ಊರಿನ ಹಿಂದಿನ ಚೀಫ್ ಆಫೀಸರವರು ಯಾವ ರೀತಿ ಶ್ರೀ ಎಂ. ಟಿ. ಶ್ರೀಕಂಠಯ್ಯನವರ ರಾಜಕಾರಣಿಗಳಾಗಿದ್ದಾರೋ ಹಾಗೇ ಈ ಹೈಸ್ಕೂಲು ಮುಖ್ಯೋಪಾಧ್ಯಾಯರೂ ಮತ್ತು ಇತರೆ ಉಪಾಧ್ಯಾಯರೂ ಇವರ ಮುಖ್ಯ ರಾಜಕೀಯ ಬೆಂಬಲಿಗರಾಗಿದ್ದಾರೆ ಎಂದರೆ ತಪ್ಪಾಗಲಾರದು. ಇಂತಹ ಉಪಾಧ್ಯಾಯರ ಕೈಲಿ ತಯಾರಾಗುವ ಯುವಕರನ್ನು ದೇವರೇ ಕಾಪಾಡಬೇಕು. ಪ್ರಸ್ತುತ ಹಿಂದಿಯಲ್ಲಿ ಫೈಲಾದ ಹುಡುಗರಿಗೆ ರಿಯಾಯಿತಿ ಕೊಡುವುದಲ್ಲದೆ ಶಾಲೆಯ ಎಲ್ಲಾ ಉಪಾಧ್ಯಾಯರನ್ನೂ ಇಲ್ಲಿಂದ ವರ್ಗಾಯಿಸಿ ಈ ಊರಿಗೆ ಮುಕ್ತಿಯನ್ನು ದಯಪಾಲಿಸಲೆಂದು ಕೋರುತ್ತೇನೆ.

"ತಾಲ್ಲೂಕಿನ ಯುವಕರು"

ಕಾರವಾರ—

ರೈತರಿಗೆ ಆಗುತ್ತಿರುವ ಅನ್ಯಾಯ !

ಕಾರವಾರ ತಾಲೂಕಿನ ಕೈಗಾದೇವಕಾರ ಮೊದಲಾದ ಹಳ್ಳಿಗಳಲ್ಲಿ ನೂರಾರು ವರ್ಷಗಳಿಂದ ಸಾವಿರಾರು ಎಕ್ರೆ ಭೂಮಿಯು ಅಂಗಲಮಯ ಸ್ಥಿತಿಯಲ್ಲಿತ್ತು. ಕಳೆದ ಹತ್ತು ಹನ್ನೆರಡು ವರ್ಷಗಳ ಲಾಗಾಯ್ತು ನಮ್ಮ ದೇಶದ ಅನ್ನ ಪರಿಸ್ಥಿತಿಯನ್ನು ಲಕ್ಷಿಸಿ, ರಾಷ್ಟ್ರೀಯ ಧೋರಣವನ್ನೇ ಆದರಿಸಿ, "ಹೆಚ್ಚು ಧಾನ್ಯ ಬೆಳೆಸಿರಿ" ಈ ಚಳುವಳಿಯ ಮೂಲಕವಾಗಿಯೂ ನಮ್ಮ ತಾಲೂಕಿನ ಸಾಮಾಜಿಕ ಕಾರ್ಯಕರ್ತರ ಪ್ರಯತ್ನದಿಂದಲೂ ಮೇಲ್ಕಾಣಿಸಿದ ಹಳ್ಳಿಗಳಲ್ಲಿ ಬಡ ರೈತರು ಅಲ್ಲಲ್ಲಿ ಹೋಗಿ ನೆಲಸಿ ಪಡ ಬಿದ್ದ ಭೂಮಿಯನ್ನು ಸರಕಾರದಿಂದ ಹಂಗಾಮಿ ಲಾಗಣಿಗೆ ಪಡಕೊಂಡರು. ಅದರಲ್ಲಿಯ ಗಿಡಗಂಟಿಗಳನ್ನು ಕಡಿದು ಒಡ್ಡು ವಗೈರೆ ದುರುಸ್ತಿ ಮಾಡಿಕೊಂಡರು ಸದರಿ ದುರುಸ್ತಿ ಕೆಲಸವನ್ನು ತಂತಮ್ಮ ಸ್ವಶ್ರಮದಿಂದಲೂ ಹಣದ ಖರ್ಚಿನಿಂದಲೂ ಸದ್ರಿ ಭೂಮಿಯನ್ನು ಈಗ ಒಳ್ಳೇ ರೂಪಿತ ಸ್ಥಿತಿಯಲ್ಲಿ ತಂದಿದ್ದಾರೆ. ಸದರಿ ಭೂಮಿ ಇರುವ ಹಳ್ಳಿಗಳು ಕಾರವಾರ ಶಹರದಿಂದ 35 ಮೈಲು ಅಂತರದಲ್ಲಿದ್ದು ಜಂಗಲ ವಿಭಾಗದಲ್ಲಿರುತ್ತವೆ, ಆದರೆ ನಮ್ಮ ಸರಕಾರದವರು ನಡುಮಧ್ಯದಲ್ಲಿ ಸದ್ರಿ ಹಳ್ಳಿಗಳ ಮುಖ್ಯವಾಗಿ ಕೈಗಾ ದೇವಕಾರ ಈ ಎರಡು ಹಳ್ಳಿಗಳ ಭೂಮಿ ಮಿಲಿಟ್ರಿ ಜನರಿಗೆ ಹಂಚಿ ಕೊಡುವ ನೆವ ಮಾಡಿ ಹತ್ತು ಹನ್ನೆರಡು ವರ್ಷ ಕಳೆದರೂ ಮೇಲಿನ ಹಳ್ಳಿಗಳಲ್ಲಿ ವಾಸಿಸಿ ಇರುವ ರೈತರಿಗೆ ಸದರಿ ಭೂಮಿಯ ಶಾಶ್ವತೆ ಈವರೆಗೂ ಕೊಟ್ಟಿಲ್ಲ, ಮೇಲಿನ ಹಳ್ಳಿಗಳಲ್ಲಿಯ ಭೂಮಿಯಲ್ಲಿ ಯಾವ ಮಿಲಿಟ್ರಿ ಮನುಷ್ಯನು ಹೋಗಿ ನೆಲಸಿದ್ದು ಇಲ್ಲ. ಸರಕಾರದವರು ಕೊಟ್ಟರೂ ಮಿಲಿಟ್ರಿಯವರು ಹೋಗಲು ಕಬುಲ ಪಡುವುದಿಲ್ಲ. ಇಂಥ ಎಷ್ಟೋ ಸಂಗ್ತಿ ತಿಳಿದುಬಂದಿರುತ್ತದೆ. ಇಷ್ಟೆಲ್ಲ ಆಗಿಹೋದರೂ ಸರಕಾರದ ನೀತಿ ಬದಲಿಸಿಲ್ಲ. ತದ್ವಿರುದ್ಧವಾಗಿ ಅನ್ಯಾಯದಿಂದ ಖರೇ 1957–58ನೇ ಸಾಲಿಗೆನೇ ಅತಿಕ್ರಮಣ ದಂಡವೂ, ಹಾಗೂ ಗೇಣಿ ಪದ್ಧತಿಯನ್ನೇ ನಷ್ಟಪಡಿಸಲು ಹೊರಟ ಕಾಂಗ್ರೆಸ್ ಸರಕಾರದವರು 1955–56ರಿಂದ ಹಂಗಾಮಿ ಲಾಗಣಿಯ ಭೂಮಿಗೆ ಗೇಣಿ ಪದ್ಧತಿಯನ್ನು ಶುರುಮಾಡಿ ಶಕ್ತಿಯಿಂದ ಗೇಣಿ ವಸೂಲಿ ಕ್ರಮ ಕೈಕೊಂಡದ್ದು ಶೋಚನೀಯವಾಗಿದೆ. ಮೇಲಾಗಿ ಈವರೆಗೆ ಬಡ ರೈತರು ಯಾವುದೇ ತರದ ಸೌಕರ್ಯವಿಲ್ಲದ ಹಳ್ಳಿಯಲ್ಲಿಯೇ ಇದ್ದು ತನ್ನ ಸರ್ವಸ್ವವೆಂದು ತಿಳಕೊಂಡ ಬಡರೈತರಿಗೆ ಓಡಿಸುವ ಸರಕಾರದ ನೀತಿಯಾಗಿದೆ. ಇಂಥಾ ಧೋರಣೆಯನ್ನು ಸಕಾಲದಲ್ಲಿ ಸರಕಾರದವರು ಬದಲಿಸುವರೆಂತ ನಾವು ಆಶಿಸುತ್ತೇವೆ. ಇಲ್ಲದಿದ್ದಲ್ಲಿ ನಮ್ಮ ಜೀವನಕ್ಕೆ ಆಧಾರವಾಗಿದ್ದ ಭೂಮಿಯನ್ನು ಉಳಿಸಿಕೊಳ್ಳಲು ಹಾಗೂ ಅನ್ಯಾಯದಿಂದ ಹೊರಿಸಿದ ದಂಡವನ್ನೂ ಮತ್ತು ಹೊಸದಾಗಿ ಶುರು ಮಾಡಿದ ಗೇಣಿ ಪದ್ಧತಿಯನ್ನು ಕಡೆಯಲು ಸತ್ಯಾಗ್ರಹ ಆಂದೋಲನವನ್ನು ಸಹ ಪ್ರಾರಂಭಿಸಬೇಕಾಗುವುದು.

ಇಂಡಿಯನ್ ಬ್ಯಾಂಕ್ ನೌಕರ ಮುಷ್ಕರ !

ಇಂಡಿಯನ್ ಬ್ಯಾಂಕಿನ ವಿವಿಧ ಬ್ರಾಂಚುಗಳಲ್ಲಿರುವ ನೌಕರರು 1956 ಮತ್ತು 57ರ ಬೋನಸ್ ಬೇಡಿಕೆಗಾಗಿ ಏಪ್ರಿಲ್ 15ರಿಂದ ಮುಷ್ಕರ ನಡೆಸುತ್ತಿದ್ದಾರೆ. ಮುಷ್ಕರವು ಯಶಸ್ವಿಯಾಗಿ ಮುಂದುವರಿಯುತ್ತಿದೆ.

ನೌಕರರ ಸಂಘದ ಉಪಾಧ್ಯಕ್ಷರಾದ ಶ್ರೀ ಪಿ. ಎಸ್. ಸುಂದರೇಶನ್‌ರವರು ಪತ್ರಿಕೆಗಳಿಗೆ ಇತ್ತಿರುವ ಹೇಳಿಕೆಯೊಂದರಲ್ಲಿ ಇಂಡಿಯನ್ ಬ್ಯಾಂಕು ಕಳೆದ ವರ್ಷಗಳಲ್ಲಿ ಅಪಾರವಾದ ಲಾಭವನ್ನು ಗಳಿಸಿದೆಯೆಂದೂ, ಬ್ಯಾಂಕಿಂಗ್ ಕಂಪೆನಿ ಕಾಯಿದೆಯ 1956ರ ತಿದ್ದುಪಡಿಯಂತೆ ಹಾಗೂ ಲೇಬರ್ ಅಪಲೇಟ್ ಟ್ರಿಬ್ಯೂನಲ್‌ನ ಅವಾರ್ಡಿನಂತೆ ನೌಕರರಿಗೆ ಸಲ್ಲಬೇಕಾಗಿದ್ದ ನ್ಯಾಯವಾದ ಬೋನಸ್ಸನ್ನು ಮ್ಯಾನೇಜ್‌ಮೆಂಟು ನಿರಾಕರಿಸಿರುವುದರಿಂದ ಮುಷ್ಕರ ನಡೆಯಿಸಬೇಕಾಗಿ ಬಂದಿದೆಯೆಂದೂ ತಿಳಿಸಿದ್ದಾರೆ.

1956–57ರ ಸಾಲಿಗೆ ಆರು ಮತ್ತು ಐದು ತಿಂಗಳ ಬೋನಸ್ಸು ಕೊಡಬೇಕೆಂದು ಸಂಘವು ಬೇಡಿಕೆಯನ್ನು ಮಂಡಿಸಿ, ಮ್ಯಾನೇಜ್‌ಮೆಂಟನೊಂದಿಗೆ ಸಂಧಾನ ನಡೆಸಿತೆಂದೂ, ಮಾರ್ಚ್ 19ರೊಳಗೆ ವಿಷಯವನ್ನು ಇತ್ಯರ್ಥಗೊಳಿಸಬೇಕೆಂದೂ, ಅರ್ಧ ತಿಂಗಳ ಬೋನಸ್ಸನ್ನು ಕೂಡಲೇ ಎಲ್ಲ ನೌಕರರಿಗೂ ಕೊಡಬೇಕೆಂದೂ, ಪ್ರ

(೧೦ನೇ ಪುಟ ನೋಡಿ)

ರಾಷ್ಟ್ರೀಯ ಮಂಡಲದ ಆಯ್ಕೆ

(ಮೊದಲನೇ ಪುಟದಿಂದ)

ನೂತನ ಘಟನಾವಳಿಗನುಗುಣವಾಗಿ ಅಧಿವೇಶನವು 101 ಮಂದಿಯ ರಾಷ್ಟ್ರೀಯ ಮಂಡಲಿಯನ್ನು ಆರಿಸಿತು. ಚುನಾವಣೆಗಳು ಒಮ್ಮತದಿಂದ ನಡೆದುದು ಕಮ್ಯೂನಿಸ್ಟ್ ಪಾರ್ಟಿ ಸಂಘಟನೆಯ ಹಿರಿಮೆಯಾಗಿದೆ. ಇದು ಪಾರ್ಟಿಯ ಐಕ್ಯತೆಯನ್ನು ಸಾರುತ್ತದೆ. ರಾಷ್ಟ್ರೀಯ ಮಂಡಲಿಯು ಕಾಂ|| ಅಜಯಕುಮಾರ್ ಘೋಷ್‌ರವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಮತ್ತೆ ಸರ್ವಾನುಮತದಿಂದ ಚುನಾಯಿಸಿತು.

ಇಪ್ಪತ್ತೈದು ಮಂದಿ ಸದಸ್ಯರುಳ್ಳ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯನ್ನು, ಏಳು ಮಂದಿಯನ್ನೊಳಗೊಂಡ ಸೆಕ್ರೆಟೇರಿಯಟ್ಟನ್ನು ರಾಷ್ಟ್ರೀಯ ಮಂಡಲಿಯು ಸರ್ವಾನುಮತದಿಂದ ಆಯ್ಕೆ ಮಾಡಿದೆ.

ಕಾರ್ಯಕಾರೀ ಸಮಿತಿಯಲ್ಲಿ ಕಾಂ|| ಅಜಯ ಘೋಷ್, ಎಸ್. ಎ. ಡಾಂಗೆ, ನಂಬೂದ್ರಿಪಾದ್, ಬಿ. ಟಿ. ರಣದಿವೆ, ಪಿ. ಸಿ. ಜೋಷಿ, ಜೆಡ್ ಎ. ಅಹಮ್ಮದ್, ಬಸವ ಪೊನ್ನಯ್ಯ, ಚಂದ್ರರಾಜೇಶ್ವರರಾವ್, ಭೂಪೇಶ ಗುಪ್ತ, ರವಿನಾರಾಯಣ ರೆಡ್ಡಿ, ಎನ್. ಪ್ರಸಾದ ರಾವ್, ಗೋವಿಂದನ್ ನಾಯರ್, ಎ ಕೆ. ಗೋಪಾಲನ್, ಜ್ಯೋತಿ ಬಸು, ಮುಜಫರ್ ಅಹಮ್ಮದ್, ಹರಿಕೃಷ್ಣ ಸಿಂಗ್ ಸುರ್ಜಿತ್, ಪಿ. ರಾಮಮೂರ್ತಿ, ಎಂ. ಆರ್. ವೆಂಕಟರಾಮನ್, ಸೋಹನ್ ಸಿಂಗ್ ಜೋಷ್, ಕೆ. ದಾಮೋದರನ್, ಗುರುಚರಣ್ ಪಟ್ನಾಯಕ್, ಭವಾನಿಸೇನ್, ಫಣಿಬೋರಾ, ಸರದೇಸಾಯಿ, ರಮೇಶಚಂದ್ರ ಇವರುಗಳು ಇದ್ದಾರೆ.

ಪಾರ್ಟಿ ಸೆಕ್ರೆಟೇರಿಯಟ್ಟಿನ ಸದಸ್ಯರಾಗಿ ಕಾಂ|| ಜೆಡ್. ಎ. ಅಹಮ್ಮದ್, ಪಿ. ಸಿ. ಜೋಷಿ, ಭೂಪೇಶ ಗುಪ್ತ, ಎಸ್. ಎ. ಡಾಂಗೆ, ಬಿ. ಟಿ. ರಣದಿವೆ, ಬಸವ ಪೊನ್ನಯ್ಯ, ಮತ್ತು ಎ. ಕೆ. ಗೋಪಾಲನ್‌ರವರು ಆಯ್ಕೆಯಾಗಿದ್ದಾರೆ.

ಬಹಿರಂಗ ಅಧಿವೇಶನ

ವಿಶೇಷ ಅಧಿವೇಶನದ ಕೊನೆಯ ದಿನ ಏಪ್ರಿಲ್ 13ರಂದು ಅಮೃತಸರದಲ್ಲಿ ಭಾರೀ ಬಹಿರಂಗ ಸಭೆ ಮತ್ತು ಮೆರವಣಿಗೆ ನಡೆಯಿತು. ಎರಡು ಮೈಲು ಉದ್ದದ ಮೆರವಣಿಗೆ ನಗರದ ಮುಖ್ಯ ಬೀದಿಗಳಲ್ಲಿ ಸುತ್ತಾಡಿ ಬಹಿರಂಗ ಸಭೆಯ ಸ್ಥಳಕ್ಕೆ ಆಗಮಿಸಿತು. ಬಹಿರಂಗ ಸಭೆಗೆ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಸೇರಿದ್ದರು.


ಅಂದು ಬೆಳಗಿನಿಂದ ಸುತ್ತುಮುತ್ತಲ ಹಳ್ಳಿಗಳಿಂದ ನಗರಗಳಿಂದ ರೈತರು, ಕಾರ್ಮಿಕರು ಮತ್ತಿತರರು ಬಹಿರಂಗ ಅಧಿವೇಶನದಲ್ಲಿ ಭಾಗವಹಿಸಲು ಆಗಮಿಸುತ್ತಿದ್ದರು. ಅಮೃತಸರ ನಗರ ಹಬ್ಬ ಆಚರಿಸುತ್ತಿರುವಂತಿತ್ತು. ಮೆರವಣಿಗೆಯು ಮುಖ್ಯ ಬೀದಿಗಳಲ್ಲಿ ಹಾದುಹೋಗುತ್ತಿದ್ದಾಗ ಜನರು ಪ್ರತಿನಿಧಿಗಳು ಮತ್ತು ಪಾರ್ಟಿಯ ನಾಯಕರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಹೂವನ್ನೆರಚುತ್ತಿದ್ದುದು ಕಾಣುತ್ತಿತು.

ಬಹಿರಂಗ ಅಧಿವೇಶನದಲ್ಲಿ ಪಾರ್ಟಿ ವಿಶೇಷ ಅಧಿವೇಶನದ ತೀರ್ಮಾನಗಳನ್ನು ವಿವರಿಸಿ ಪಾರ್ಟಿ ನಾಯಕರುಗಳು ಭಾಷಣ ಮಾಡಿದರು. ಕಾಂ|| ಗೋಪಾಲನ್ ಪಂಜಾಬಿ ಭಾಷೆಯಲ್ಲಿಯೂ, ಕಾಂ|| ರಾಮಮೂರ್ತಿ ಹಿಂದಿ ಭಾಷೆಯಲ್ಲಿಯೂ ಭಾಷಣ ಮಾಡಿದ್ದು ಸಭೆಯ ವಿಶೇಷತೆಯಾಗಿದ್ದಿತು. ಕಾಂ|| ಪಿ. ಸಿ. ಜೋಷಿ, ಸ್ಯೊಹನ್ ಸಿಂಗ್ ಜೋಷ್ ಮತ್ತು ಹರಿಕೃಷ್ಣ ಸಿಂಗ್ ಸೂರಜಿತ್‌ರವರೂ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು.

'ಕಮ್ಯೂನಿಸ್ಟ್ ಪಾರ್ಟಿ ಜಿಂದಾಬಾದ್' 'ಇಂಕ್ವಿಲಾಬ್ ಜಿಂದಾಬಾದ್' ಎಂಬ ಘೋಷಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಕ್ರಾಂತಿ ಪುರುಷ ಲೆನಿನ್ನರ 78ನೆಯ ಜನ್ಮದಿನ

ಏಪ್ರಿಲ್ 21, ಸಮಾಜವಾದದ ಶಿಲ್ಪಿ ಲೆನಿನರ 78ನೆಯ ಜನ್ಮದಿನೋತ್ಸವವನ್ನು ವಿಶ್ವದ ಎಲ್ಲೆಡೆಗಳಲ್ಲಿಯೂ ದಲಿತ ವರ್ಗವು ಕೊಂಡಾಡುತ್ತದೆ.



ಲೆನಿನ್
ಜನನ ಏಪ್ರಿಲ್ 21, 1880
ಮರಣ ಜನವರಿ 21, 1924

ಲೆನಿನ್ ತನ್ನ ಜೀವಿತ ಕಾಲದಲ್ಲಿ ಮಾರ್ಕ್ಸ್‌ವಾದದ ಕನಸನ್ನು ನನಸಾಗಿಸಿದರು. ರಷ್ಯದಲ್ಲಿ ಬೋಲ್ಷೆವಿಕ್ ಪಾರ್ಟಿಯ ನಾಯಕತ್ವ ವಹಿಸಿ 1917ರಲ್ಲಿ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಕ್ರಾಂತಿಯನ್ನು ಯಶಸ್ವಿಗೊಳಿಸಿದರು. ಜಾರ್‌ಶಾಹಿಯ ನಿರಂಕುಶ ಆಡಳಿತೆಯನ್ನು ಕೊನೆಗೊಳಿಸಿ, ಕಾರ್ಮಿಕರ, ದುಡಿಯುವ ಜನತೆಯ ಸೋವಿಯತ್ ಸರಕಾರ ಸ್ಥಾಪಿಸಿದರು. ಜಗತ್ತಿನಲ್ಲಿ ಪ್ರಥಮ ಸಮಾಜವಾದಿ ಸಮಾಜದ ಶಿಲ್ಪಿ ಎಂದು ಖ್ಯಾತಿ ಗಳಿಸಿದರು.

ಲೆನಿನರ ಜೀವಿತ ಕಾಲದಲ್ಲಿ ಸೋವಿಯತ್ ಯೂನಿಯನ್ ಒಂದೇ ಸಮಾಜವಾದೀ ರಾಷ್ಟ್ರವಾಗಿತ್ತು. ಇಂದು ಸಮಾಜವಾದವು ಒಂದು ವಿಶ್ವವಾಗಿ ಬೆಳೆದಿದೆ. ಸಮಾಜವಾದೀ ತತ್ವವು ವಿಶ್ವದ ಎಲ್ಲೆಡೆಗಳಲ್ಲಿಯೂ ಆವರಿಸಿದೆ. ಸಾಮ್ರಾಜ್ಯಶಾಹೀ ವಿಶ್ವವು ಶಿಥಿಲಗೊಳ್ಳುತ್ತಿದೆ, ವಸಾಹತು ನೀತಿ ಅಳಿಯುತ್ತಾ ಬರುತ್ತಿದೆ.

ವಿಶ್ವದ ಎಲ್ಲದಲಿತವರ್ಗದ ಪ್ರೇಮಿಯಾಗಿದ್ದ ಲೆನಿನ್, ಶ್ರಮಜೀವಿ ಅಂತರ ರಾಷ್ಟ್ರಿಯ ಸೌಹಾರ್ದತೆಯನ್ನು ಕುರಿತು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಮಾರ್ಕ್ಸ್‌ವಾದ ಸಿದ್ಧಾಂತವನ್ನು ಅಭಿವೃದ್ಧಿಗೊಳಿಸಿದ್ದಾರೆ. ವಿಶ್ವಶಾಂತಿಯನ್ನು ಕಾಪಾಡುವ, ಯುದ್ಧಗಳನ್ನು ತಡೆಯುವ ಮಹತ್ಕಾರ್ಯವು ಶ್ರಮಜೀವಿಗಳ ಕೈಯಲ್ಲಿದೆ. ಜನತೆಯ ಪ್ರಬಲವಾದ ಚಳವಳಿಯು ಶಾಂತಿಯನ್ನು ಕಾಪಾಡಲು ಸಾಧ್ಯ ಎಂದು ಅಂದು ಲೆನಿನ್ ಘೋಷಿಸಿದ್ದು ಇಂದು ಹೆಚ್ಚು ಹೆಚ್ಚು ನಿಜವಾಗುತ್ತಿದೆ.

ಲೆನಿನ್ ಕ್ರಾಂತಿಕಾರೀ ನಾಯಕರಾಗಿದ್ದುದೆಷ್ಟೇ ಅಲ್ಲದೆ, ಜೀವನದಲ್ಲಿ ಸರಳ ಮನೋಭಾವದವರೂ, ಸಹೃದಯಿಯೂ ಆಗಿದ್ದರು. ಅವರ ಜನ್ಮದಿನದಂದು ನಾವು ನಮ್ಮ ಶ್ರದ್ಧಾಂಜಲಿಯನ್ನರ್ಪಿಸುತ್ತೇವೆ.

ಭಾರತ ಕಮ್ಯೂನಿಸ್ಟ್‌ಪಾರ್ಟಿಯ

ಹದಿನೈದು ಅಂಶಗಳ ರಾಷ್ಟ್ರೀಯ ಕಾರ್ಯಕ್ರಮ

ರಾಜಕೀಯ ನಿರ್ಣಯದಲ್ಲಿ ಪಾಲ್ಘಾಟ್ ಅಧಿವೇಶನದ ಕಾರ್ಯಕ್ರಮವನ್ನು ಒತ್ತಿ ಹೇಳುತ್ತ ಹದಿನೈದು ಅಂಶಗಳ ತಕ್ಷಣದ ರಾಷ್ಟ್ರೀಯ ಕಾರ್ಯಕ್ರಮವನ್ನು ಕೊಡಲಾಗಿದೆ. ಈ ಅಂಶಗಳ ಮೇಲೆ ರಾಷ್ಟ್ರೀಯ ಚಳವಳಿಯನ್ನು ನಡೆಸುವಂತೆ ಕರೆಕೊಡಲಾಗಿದೆ. ಹದಿನೈದು ಅಂಶಗಳು ಈ ಕೆಳಕಂಡಂತೆ ಇವೆ:—

1. ಪ್ರಜಾಪ್ರಭುತ್ವ ರೀತಿಯಲ್ಲಿ ಯೋಜನೆಯ ಗುರಿಗಳನ್ನು ಕಾರ್ಯಗತಗೊಳಿಸುವುದು.

2. ಬಲಪಂಥವಾದಿ ಪ್ರತಿಗಾಮಿಗಳ ಯೋಜನೆಯನ್ನು ಬಹಿರಂಗಗೊಳಿಸುವುದು.

3. ಅಮೆರಿಕನ್ ಬಂಡವಾಳದ ಪ್ರವೇಶಕ್ಕೆ ವಿರೋಧ.

4 ದೊಡ್ಡ ಬ್ಯಾಂಕುಗಳು, ಆಹಾರ ಪದಾರ್ಥಗಳ ಒಟ್ಟು ಮಾರಾಟವನ್ನು ರಾಷ್ಟ್ರೀಕರಣ ಮಾಡುವುದು, ಪ್ರಭುತ್ವ ವಾಣಿಜ್ಯ ಕ್ಷೇತ್ರವನ್ನು ವಿಸ್ತರಿಸುವುದು, ಬ್ರಿಟಿಷ್ ಮತ್ತು ಭಾರತೀಯ ಗುತ್ತೇದಾರರ ಮೇಲೆ ಹತೋಟಿ ಇರಿಸಿಕೊಳ್ಳುವುದು. ಅವುಗಳ ಲಾಭದ ಮೇಲೆ ಪಂಪಿತಿಯನ್ನು ವಿಧಿಸುವುದು ಮತ್ತು ರಾಷ್ಟ್ರೀಯ ಹಿತದೃಷ್ಟಿಯಿಂದ ಅವುಗಳ ಮೇಲೆ ಪ್ರಭುತ್ವ ಪರಿಣಾಮಕಾರಿಯಾದ ಹತೋಟಿ ಇರಿಸಿಕೊಳ್ಳುವುದು.

5. ಆಹಾರದ ಬಿಕ್ಕಟ್ಟು ಮತ್ತು ಅದರ ಪರಿಹಾರಕ್ಕೆ ಪಾರ್ಟಿಯ ಸಲಹೆಗಳು.

6. ಅಧಿಕ ತೆರಿಗೆ ಮತ್ತು ಅಧಿಕ ಬೆಲೆ ವಿರುದ್ಧ ಹೋರಾಡುವುದು.

7. ಅಕ್ಟೋಬರ್ 1957ರ ಕೇಂದ್ರ ಸಮಿತಿ ನಿರ್ಣಯದ ಮೇಲೆ ಭಾಷಾ ಪ್ರಶ್ನೆಯನ್ನು ಇತ್ಯರ್ಥಗೊಳಿಸುವುದು.

8. ಟ್ರೇಡ್ ಯೂನಿಯನ್ ಕೇಂದ್ರಗಳು ಮಾರ್ಚ್ 27, 1958ರಂದು ರಾಷ್ಟ್ರೀಯ ಸಭೆಗಳಲ್ಲಿ ಮಂಡಿಸಿರುವ ಬೇಡಿಕೆಗಳನ್ನು ಪಡೆಯಲು ಚಳುವಳಿ ನಡೆಸುವುದು ಮತ್ತು ಅದರ ಆಧಾರದ ಮೇಲೆ ಸಾಮೂಹಿಕ ಒಪ್ಪಂದಗಳನ್ನು ಮಾಡಿಕೊಳ್ಳುವುದು.

9. ಲಂಚಖುಷಮತ್ತಿನ ವಿರುದ್ಧ ಹೋರಾಡುವುದು.

10. ಪ್ರಗತಿಪರವಾದ ಭೂಸುಧಾರಣೆಗಳಿಗಾಗಿ ಹೋರಾಡುವುದು.

11. ಮತೀಯ, ಜಾತೀಯವಾದಗಳ ವಿರುದ್ಧ ಸೈದ್ಧಾಂತಿಕ ಹೋರಾಟ ನಡೆಸುವುದು.

12. ನಿರಾಶ್ರಿತರ ಪುನರ್ವ್ಯವಸ್ಥೆ.

13. ಪ್ರಜಾಪ್ರಭುತ್ವ ಹಕ್ಕುಗಳ ವಿಸ್ತರಣೆಗಾಗಿ ಶ್ರಮಿಸುವುದು.

14. ಪಾರ್ಲಿಮೆಂಟು ಮತ್ತು ಶಾಸನ ಸಭಾ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಿರ್ವಹಿಸುವುದು.

15. ಶೃಂಗ ಸಮ್ಮೇಳನಕ್ಕಾಗಿ, ದ್ವಿತೀಯ ಬಾಂಡುಂಗ್ ಸಮ್ಮೇಳನಕ್ಕಾಗಿ, ನ್ಯೂಕ್ಲಿಯರ್ ಶಸ್ತ್ರಗಳ ಪ್ರಯೋಗದ ಅಂತ್ಯಕ್ಕಾಗಿ, ಮತ್ತು ಇಂಡೋನೇಷಿಯ ಮತ್ತು ಅಲ್ಜೀರಿಯದ ಜನತೆಯೊಂದಿಗೆ ಸೌಹಾರ್ದಕ್ಕಾಗಿ ಚಳವಳಿ ನಡೆಸುವುದು.

ಇಂಡಿಯನ್ ಬ್ಯಾಂಕ್ ನೌಕರರ........

(೯ನೇ ಪುಟದಿಂದ)

ಶ್ನೆಯ ಇತ್ಯರ್ಥಕ್ಕೆ ಅದನ್ನು ಪಂಚಾಯ್ತಿಗೆ ಒಪ್ಪಿಸಬೇಕೆಂದೂ ಸಂಘವು ಕೇಳಿಕೊಂಡಿತ್ತೆಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಆದರೆ ಮ್ಯಾನೇಜಮೆಂಟು ಕೇವಲ ಅರ್ಧ ತಿಂಗಳ ಬೋನಸ್ಸನ್ನೇ ಒಪ್ಪಿಕೊಳ್ಳಬೇಕೆಂದು ಒತ್ತಾಯ ತಂದಿದ್ದರಿಂದಾಗಿ ಮುಷ್ಕರ ಅನಿವಾರ್ಯವಾಗಿದೆ ಮತ್ತು ಮುಂದುವರಿಯುತ್ತದೆ ಎಂದು ತಿಳಿಸಿದ್ದಾರೆ.

ಕಮ್ಯೂನಿಸ್ಟ್ ಪಾರ್ಟಿ ಅಧಿವೇಶನದ ಪ್ರತಿನಿಧಿವರ್ಗ

ಅಧಿವೇಶನದ ಅಂತ್ಯದಲ್ಲಿ ಕ್ರಿಡೆನ್ಷಿಯಲ್ಸ್ ಸಮಿತಿಯು ಇತ್ತಿರುವ ಹೇಳಿಕೆಯಲ್ಲಿ ಪ್ರತಿನಿಧಿವರ್ಗದ ವಿಂಗಡನೆಯನ್ನು ವಿವರಿಸಲಾಗಿದೆ. ಅದರಂತೆ ಒಟ್ಟು 474ಮಂದಿ ಪ್ರತಿನಿಧಿಗಳ ಪೈಕಿ, ಕಾರ್ಮಿಕ ವರ್ಗಕ್ಕೆ ಸೇರಿದವರು 45, ಮಧ್ಯಮ ವರ್ಗದವರು 276, ರೈತವರ್ಗ 101, ವ್ಯವಸಾಯ ಕೂಲಿಗಾರರು 13, ಭೂಮಾಲಿಕರು 31, ಇತರ ವರ್ಗಕ್ಕೆ ಸೇರಿದವರು 8 ಮಂದಿ ಆಗಿದ್ದಾರೆ.

ವಿದ್ಯಾಭ್ಯಾಸ ಮಟ್ಟದಲ್ಲಿ ಮೆಟ್ರಿಕ್ ಆಗಿಲ್ಲದವರು 133 ಮಂದಿ, ಮೆಟ್ರಿಕ್ ವರೆಗೆ ಓದಿರುವರು 181 ಮಂದಿ ಮತ್ತು ಪದವೀಧರರು 106 ಮಂದಿ ಇದ್ದಾರೆ ಎಂದು ವಿವರಿಸಲಾಗಿದೆ.

—(ನಮ್ಮ ಪ್ರತಿನಿಧಿಯಿಂದ)

REG. No. M. 6867

Edited Printed and Published by C. R. Krishna Rao, at Janashakthi Printers
L—59, K. Y. Temple St., Sultanpet Bangalore—2 phone 3810